ಐಕ್ಯರಂಗ

ವಾರ ಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 44 – 45 ನವಂಬರ್ 6, 1983 ಬೆಲೆ 60 ಪೈಸೆ

ಗ್ರೆನಡಾದ ಮೇಲೆ ಅಮೇರಿಕನ್ ದುರಾಕ್ರಮಣ

—ಪೊಲಿಟ್ ಬ್ಯೂರೋ ಖಂಡನೆ

ಗ್ರೆನೆಡಾದ ಮೇಲೆ ಅಮೇರಿಕನ್ ಸಾಮ್ರಾಜ್ಯ ಶಾಹಿಗಳು ಎಸಗಿರುವ ದುರಾಕ್ರಮಣವನ್ನು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಪೊಲಿಟ್ ಬ್ಯೂರೋ ತೀವ್ರವಾಗಿ ಖಂಡಿಸುತ್ತದೆ. ಗ್ರೆನೆಡಾದ ಕ್ರಾಂತಿಕಾರೀ ಚಳವಳಿಯನ್ನು ಒಮ್ಮೆಗೇ ಮುಗಿಸಿ ಹೇಳಿದಂತೆ ಕೇಳುವ ನವವಸಾಹತು ಶಾಹೀ ಸರ್ಕಾರವೊಂದನ್ನು ಸ್ಥಾಪಿಸುವುದೇ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಗುರಿಯಾಗಿದೆ.

ನಿಕರಾಗುವಾದಲ್ಲಿ ದಾಳಿ ಮಾಡುವ, ಸಾಲ್ವಡೋರ್‌ನ ಬಿಡುಗಡೆಯ ಹೋರಾಟವನ್ನು ಹತ್ತಿಕ್ಕುವ, ಕ್ಯೂಬಾವನ್ನು ಬೆದರಿಸುವ ಸಾಮ್ರಾಜ್ಯಶಾಹೀ ಯೋಜನೆಯ ಒಂದು ಭಾಗ ಈ ಆಕ್ರಮಣ.

ಹಿಂದಿನ ನಾಲ್ಕು ವರ್ಷಗಳಲ್ಲಿ, 1979ರ ಮಾರ್ಚಿನಲ್ಲಿ ಆಡಳಿತ ಬದಲಾವಣೆಯಾದಂದಿನಿಂದ ಮತ್ತು ಪ್ರಜಾಸತ್ತಾತ್ಮಕ, ಸಾಮ್ರಾಜ್ಯಶಾಹೀ ವಿರೋಧಿ ರಾಷ್ಟ್ರೀಯ "ನ್ಯೂ ಜ್ಯೂಯೆಲ್" ಚಳವಳಿ ಅಧಿಕಾರ ಹಿಡಿದಂದಿನಿಂದ ಗ್ರೆನಡಾದ ಜನತೆ ಹೊಸ ಲಾಭಗಳನ್ನು ಗಳಿಸಿತ್ತು. ಪಾಶ್ಚಾತ್ಯ ಪರವಾದ ಎಲ್ಲ ಕೆರಿಬಿಯಾ ದೇಶಗಳ ಮೇಲೂ ಈ ಮುನ್ನಡೆ ಪ್ರಭಾವ ಬೀರಿತ್ತು.

ಕೆರಿಬಿಯದ ದ್ವೀಪಗಳ ಜನತೆಗೆ ಸ್ಫೂರ್ತಿ ತುಂಬುವ ಮಾದರಿಯಾಗುತ್ತಿದ್ದುದನ್ನು ತಡೆಯಲು ಈ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಗ್ರೆನಡಾ ಕ್ರಾಂತಿಯನ್ನು ಹತ್ತಿಕ್ಕ ಬಯಸುತ್ತಾರೆ. ಕೆನಡಾದಂತಹ ಅನೇಕ ಅಮೇರಿಕಾ ಸ್ನೇಹಯುಕ್ತ ಸಂಸ್ಥಾನಗಳ ಮಿತ್ರ ರಾಷ್ಟ್ರಗಳು ಗ್ರೆನಡಾದ ಮೇಲಿನ ದುರಾಕ್ರಮಣವನ್ನು ಖಂಡಿಸಿವೆ. ಲೆಬನಾನಿನಲ್ಲಿ ಮಿಲಿಟರಿ ಮಧ್ಯ ಪ್ರವೇಶವನ್ನು ಹೆಚ್ಚಿಸುತ್ತಿರುವ ಮತ್ತು ನಮ್ಮದೇ ನಾಡನ್ನು ಅಸ್ಥಿರಗೊಳಿಸಲು ನಡೆಯುತ್ತಿರುವ ಪ್ರಯತ್ನಗಳು ತೀವ್ರವಾಗುತ್ತಿರುವ ವೇಳೆಯಲ್ಲಿಯೇ ಅಮೇರಿಕಾ ಈ ಪಾತಕವೆಸಗಿದೆ.

ಅಮೇರಿಕನ್ ಸಾಮ್ರಾಜ್ಯಶಾಹಿಗಳನ್ನು ಖಂಡಿಸಲು, ಗ್ರೆನಡಾದ ಜನತೆಗೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಲು ಸಭೆ, ಮೆರವಣಿಗೆಗಳನ್ನು ನಡೆಸಬೇಕೆಂದು ಪೊಲಿಟ್‌ಬ್ಯೂರೋ ಭಾರತದ ಜನತೆಗೆ ಕರೆ ಕೊಡುತ್ತದೆ. ಅಮೇರಿಕದ ದುರಾಕ್ರಮಣವನ್ನು ತಾನೂ ಖಂಡಿಸುವುದಲ್ಲದೆ, ಅಲಿಪ್ತ ಚಳವಳಿಯ ನಾಯಕನಾಗಿ, ಅಲಿಪ್ತ ರಾಷ್ಟ್ರಗಳ ಸಭೆಯನ್ನು ಕರೆದು ಈ ಆಕ್ರಮಣವನ್ನು ತಡೆಯಬೇಕೆಂದು ಭಾರತ ಸರ್ಕಾರವನ್ನು ಒತ್ತಾಯಿಸುತ್ತದೆ.

ಗ್ರೆನಡಾ ಮೇಲಿನ ಆಕ್ರಮಣ:

ದೆಹಲಿಯಲ್ಲಿ ಪ್ರತಿಭಟನಾ ಪ್ರದರ್ಶನ

ಗ್ರೆನಡಾ ಮೇಲಿನ ಅಮೆರಿಕನ್ ಆಕ್ರಮಣವನ್ನು ಖಂಡಿಸುವ ಸಲುವಾಗಿ ಸಿ.ಪಿ.ಐ.(ಎಂ.) ದೆಹಲಿಯಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿತು. ಈ ಸಂಬಂಧವಾಗಿ ಏರ್ಪಡಿಸಿದ್ದ ಮೆರವಣಿಗೆಯನ್ನು ಇಂದಿರಾ ಸರ್ಕಾರ ತಡೆದು ನಿಲ್ಲಿಸಿತು. ಅಮೇರಿಕನ್ ರಾಯಭಾರಿ ಕಚೇರಿಯ ಮುಂದೆ ಕಾ. ಇ.ಎಂ.ಎಸ್. ಅವರ ನೇತೃತ್ವದಲ್ಲಿ ಹೊರಟ ಮೆರವಣಿಗೆಯನ್ನು ಇಂಡೋನೇಶಿಯ ಮತ್ತು ಚೀನಾ ರಾಯಭಾರಿ ಕಚೇರಿಯ ಮಧ್ಯೆ ದೆಹಲಿ ಪೋಲೀಸರ ಒಂದು ದೊಡ್ಡ ಪಡೆ ತಡೆಯಿತು. ನಂತರ ಸ್ಥಳದಲ್ಲೇ ಬಹಿರಂಗ ಸಭೆಯನ್ನು ಏರ್ಪಡಿಸಲಾಯಿತು. ಸಭೆಯನ್ನುದ್ದೇಶಿಸಿ ಕಾ. ಇ.ಎಂ.ಎಸ್. ಮಾತನಾಡಿದರು.

ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿ, ಯುವಜನತೆ ಸೇರಿದಂತೆ ಸಹಸ್ರಾರು ಜನ ಪಾಲ್ಗೊಂಡಿದ್ದ ಮೆರವಣಿಗೆಯಲ್ಲಿ ಪೊಲಿಟ್ ಬ್ಯೂರೋ ಸದಸ್ಯರಾದ ಕಾ. ಬಾಲಾನಂದನ್, ಸಂಸತ್ ಸದಸ್ಯರಾದ ಕಾ. ಸುಶೀಲ್ ಭಟ್ಟಾಚಾರ್ಯ, ಸಿ.ಪಿ.ಐ.(ಎಂ.) ದೆಹಲಿ ರಾಜ್ಯ ಸಮಿತಿ ಕಾರ್ಯದರ್ಶಿ ಕಾ. ಪ್ರಕಾಶ್ ಕಾರತ್ ಭಾಗವಹಿಸಿದ್ದರು.

ಸಿ.ಐ.ಟಿ.ಯು.ನ ಅಧ್ಯಕ್ಷರಾದ ಕಾ. ಬಿ. ಟಿ. ರಣದಿವೆ ಅವರು ಗ್ರೆನಡಾ ಆಕ್ರಮಣ ಎಂದೂ ಅಪಾಯಕ್ಕೆ ಒಳಗಾಗದಿರುವ ಅಮೇರಿಕನ್ ಪ್ರಜೆಗಳ ರಕ್ಷಣೆಯ ನೆಪದಲ್ಲಿ ನಡೆದಿರುವುದು ತೀರಾ ಕ್ರೂರ ಎಂಬುದಾಗಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯೋತ್ಸವ

ಈ ಸಲದ ರಾಜ್ಯೋತ್ಸವ ಒಂದು ಹೊಸ ಸಂದರ್ಭದಲ್ಲಿ ಆಚರಿಸಲ್ಪಟ್ಟದ್ದು ಒಂದು ವಿಶೇಷ. ಏಕೆಂದರೆ ಇಲ್ಲಿಯವರೆಗಿನ ರಾಜ್ಯೋತ್ಸವಗಳೆಲ್ಲಾ ನಡೆದಿರುವುದು ಕಾಂಗ್ರೆಸ್ ಪಕ್ಷದ ಆಡಳಿತ ಇದ್ದಾಗಲೇ. ಆದರೆ ಜನವರಿ ಚುನಾವಣೆಯಲ್ಲಿ ಮೂರೂವರೆ ದಶಕಗಳ ಏಕಪಕ್ಷದ (ಕಾಂಗ್ರೆಸ್) ಆಡಳಿತವನ್ನು ಕೊನೆಗೊಳಿಸಿದ ಕರ್ನಾಟಕದ ಜನತೆ ಈ ಬಾರಿಯ ರಾಜ್ಯೋತ್ಸವ ಒಂದು ಹೊಸ ಸನ್ನಿವೇಶದಲ್ಲಿ ಪ್ರವೇಶಿಸುವಂತೆ ಮಾಡಿದ್ದಾರೆ.

ಕಳೆದ ಜನವರಿ ಚುನಾವಣೆಯಲ್ಲಿ ಕಾಂಗ್ರೆ ಪಕ್ಷವನ್ನು ಸೋಲಿಸಿ ಅಧಿಕಾರ ಸೂತ್ರ ವಹಿಸಿಕೊಂಡ ಜನತಾ ಸರ್ಕಾರ ಎದುರಿಸಬೇಕಾಗಿ ಬಂದ ಸಮಸ್ಯೆಗಳು ಅನೇಕ. ಅಧಿಕಾರಹೀನರಾಗಿ ಅರೆಕ್ಷಣವೂ ಇರಲಾಗದ ಕಾಂಗ್ರೆ ಜನತಾ ಸರಕಾರವನ್ನು ಉರುಳಿಸಲು ಮಾಡಿದ ಈಗಲೂ ಮಾಡುತ್ತಿರುವ ಪ್ರಯತ್ನಗಳು ಅಸಂಖ್ಯ. ಈ ಮಧ್ಯೆ ಹೊಸ ಜನತಾ ಸರ್ಕಾರದ ಸಾಧನೆ ಮತ್ತು ಅದಕ್ಕೆ ಅಡ್ಡಿಯಾಗಿ ನಿಂತಿರುವ ಅನೇಕ ಮಿತಿಗಳ ಕುರಿತು ಚಿಂತಿಸಬೇಕಾಗುತ್ತದೆ.

ರಾಜ್ಯಗಳಿಗೆ ಸಂಬಂಧಪಟ್ಟಂತೆ ಬಹಳಷ್ಟು ಅಧಿಕಾರಗಳು ಕೇಂದ್ರ ಸರ್ಕಾರದಲ್ಲೇ ಉಳಿದಿದ್ದರೂ ಕೂಡ ಹೊಸ ಸರ್ಕಾರ ತನಗೆ ಲಭ್ಯವಿರುವ ಅಧಿಕಾರದ ಪರಿಮಿತಿಯಲ್ಲೇ ಹಲವಾರು ಸುಧಾರಕ ಕ್ರಮಗಳನ್ನು ಕೈಗೊಂಡಿದೆ. ದಶಕಗಳಿಗೂ ಹೆಚ್ಚು ಕಾಲದಿಂದ ನಡೆಯದೇ ಉಳಿದಿದ್ದ ಪುರಸಭೆ–ನಗರಸಭೆಗಳಿಗೆ ಚುನಾವಣೆಯನ್ನು ನಡೆಸಿದ್ದು, ಕುಡಿಯುವ ನೀರಿನ ಕುರಿತು ವಹಿಸಿದ ಕಾಳಜಿ, ಪಂಚಾಯತ್ ಮಸೂದೆಯನ್ನು ಜಾರಿಗೆ ತರುವ ಪ್ರಯತ್ನ ಮುಂತಾದವುಗಳೆಲ್ಲ ಹೊಸ ಸರ್ಕಾರವನ್ನು ಕೊಂಚ ಭಿನ್ನವಾಗಿ ಗುರುತಿಸಲು ಸಹಾಯ ಮಾಡುತ್ತವೆ.

ರಾಜ್ಯೋತ್ಸವದ ಸಂದರ್ಭದಲ್ಲಿ ಸರ್ಕಾರ ಪ್ರಕಟಿಸಿರುವ ಕೆಲವು ಹೇಳಿಕೆಗಳು ಕೆಲವು ವಿಭಾಗದ ಜನರಿಗಾದರೂ ಸ್ವಲ್ಪಮಟ್ಟಿನ ಪರಿಹಾರ ಒದಗಿಸುವ ಸಾಧ್ಯತೆಯಿದೆ. ಬಸ್ ಪ್ರಯಾಣದಲ್ಲಿ ರಿಯಾಯಿತಿ, ಗ್ರಾಮೀಣ ನಿರುದ್ಯೋಗಿಗಳಿಗೆ ಉದ್ಯೋಗ, ವಿಧವೆಯರಿಗೆ ಮಾಶಾಸನ, ಖಾಸಗಿ ನ್ಯಾಯಬೆಲೆ ಅಂಗಡಿಗಳ ರದ್ದತಿ ಮುಂತಾದ ಕ್ರಮಗಳನ್ನು ಸ್ವಾಗತಿಸುವುದರ ಜೊತೆಗೇ ಅಕ್ಕಿ–ಹಾಲು–ವಿದ್ಯುಚ್ಛಕ್ತಿಗಳ ಬೆಲೆಯನ್ನು ಏರಿಸಿರುವುದನ್ನು ನಾವು ಖಂಡಿಸಲೇಬೇಕಾಗುತ್ತದೆ.

ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಕಾರ್ಯರೂಪಕ್ಕೆ ತರುವಲ್ಲಿ ಆಗುತ್ತಿರುವ ತೊಂದರೆಗಳನ್ನು ಸರಿಪಡಿಸಿ ಸರ್ಕಾರ ತೀವ್ರ ರೀತಿಯ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಸರ್ಕಾರದ ಪೋಲಿಸ್ ಧೋರಣೆಯಲ್ಲಿ ಇನ್ನೂ ಕೂಡ ಸುಧಾರಣೆಗಳಾಗಬೇಕಾಗಿದೆ. ಬೆಂಗಳೂರಿನಂತಹ ಪ್ರದೇಶಗಳಲ್ಲಿ ಪೋಲಿಸರು ಕಾರ್ಮಿಕ ವಿವಾದಗಳಲ್ಲಿ ತಲೆಹಾಕಿ ಮಾಲೀಕರ ಪರ ನಿಲ್ಲುವುದು ಅದಷ್ಟು ಕಡಿಮೆಯಾಗಿದ್ದರೂ ಕೂಡ ಧಾರವಾಡ, ಉತ್ತರ ಕನ್ನಡ ಮುಂತಾದ ಕಡೆಗಳಲ್ಲಿ ಪೋಲೀಸರು ಸರಿಯಾಗಿ ವರ್ತಿಸದೆ ಕಾರ್ಮಿಕರ ಮೇಲೆ ಆಕ್ರಮಣವನ್ನು ನಡೆಸುತ್ತಿದ್ದಾರೆ. ಇದನ್ನು ಸರಿಪಡಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.

ಸರ್ಕಾರ ಈ ದಿಸೆಯಲ್ಲಿ ಕಾರ್ಯಾರಂಭ ಮಾಡಿ ತನ್ನ ಯೋಜನೆಗಳೆಲ್ಲವನ್ನು ಕಾರ್ಯರೂಪಕ್ಕೆ ತರಲು ಪ್ರಾಮಾಣಿಕವಾಗಿ ಶ್ರಮಿಸಬೇಕಾಗಿದೆ.

ಸರ್ಕಾರ ಕೈಗೊಳ್ಳುವ ತೀರ್ಮಾನಗಳು ಅನುಷ್ಠಾನಕ್ಕೆ ಬರುವುದು ನೌಕರಶಾಹಿಯ ಮುಖಾಂತರವೇ ಆಗಿರುವುದರಿಂದ ಅದನ್ನು ಚುರುಕುಗೊಳಿಸಲು, ಸುವ್ಯವಸ್ಥಿತವಾಗಿಡಲು ಜನತೆ ಸದಾ ಜಾಗ್ರತರಾಗಿರುವುದು ಅವಶ್ಯಕ.

ಗಮನಿಸಿ

ಮುದ್ರಣದ ತೊಂದರೆಯಿಂದಾಗಿ
30 – 10 – 1983 ರ ಸಂಚಿಕೆ
ಪ್ರಕಟಿಸಲಾಗದುದಕ್ಕಾಗಿ ವಿಷಾದಿಸುತ್ತೇವೆ.

—ವ್ಯವಸ್ಥಾಪಕ

ಮುಂಬೈ ಎ. ಐ. ಸಿ. ಸಿ. ಅಧಿವೇಶನ

—ಇ. ಎಂ. ಎಸ್. ನಂಬೂದಿರಿಪಾಡ್

ಕಾಂಗ್ರೆಸ್ (ಐ)ನ ಕಾರ್ಯಕಾರಿ ಸಮಿತಿಯ ಅಧಿವೇಶನ ನಡೆಯುವುದು ಅಪರೂಪ. ಎ.ಐ.ಸಿ.ಸಿ. (ಐ) ಸಭೆಗಳಂತೂ ಮತ್ತೂ ಅಪರೂಪ. ಆದ್ದರಿಂದ ಮುಂಬೈಯಲ್ಲಿ ನಡೆದ ಎ.ಐ.ಸಿ.ಸಿ.ಯ ಎರಡು ಸಭೆಗಳು ನಿಸ್ಸಂಶಯವಾಗಿಯೂ ಸುದ್ದಿಯ ಸುಗ್ಗಿಯಾಗಿದ್ದವು. ಷಣ್ಮುಖಾನಂದ ಸಭಾಂಗಣದಲ್ಲಿ ಅಂಗೀಕರಿಸಲ್ಪಟ್ಟ ಠರಾವುಗಳು, ಭಾಷಣಗಳೂ ಹಾಗೂ ಇತರ ಕಲಾಪಗಳಿಗೆ ಪತ್ರಿಕೆಗಳಲ್ಲಿ ಭಾರೀ ಪ್ರಚಾರ ದೊರೆಯಿತು.

ಆದರೆ ಜನರನ್ನು ಬಾಧಿಸುತ್ತಿರುವ ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಅಧಿವೇಶನ ಗಂಭೀರ ಚರ್ಚೆ ನಡೆಸಿದೆಯೇ ? ಕಾಂಗ್ರೆಸ್ ಒಂದು ಜೀವಂತ ಸಂಘಟನೆಯಾಗಿದ್ದಾಗ ಸದಸ್ಯರು ಮುಕ್ತವಾಗಿ ಭಯವಿಲ್ಲದೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಒಂದು ಅವಿರೋಧ ಅಥವಾ ಬಹುಮತದ ನಿರ್ಣಯಕ್ಕೆ ಬರುತ್ತಿದ್ದರು. ಈ ಸಲ ಸದಸ್ಯರಿಗೆ ಅಂತಹ ಅವಕಾಶವಿತ್ತೇ ? ಇಲ್ಲ. ನಾಯಕತ್ವದ ಈಗಿನ ಕಾರ್ಯ ವೈಖರಿಯಲ್ಲಿ ಪ್ರಾಮಾಣಿಕ ಟೀಕೆ ಮಾಡುವವರಿಗೆ ಸ್ಥಾನವಿಲ್ಲ.

ಈ ಸಂದರ್ಭದಲ್ಲಿ ಕಾಂಗ್ರೆಸ್ (ಐ) ಸಂಸದೀಯ ಮಂಡಳಿಯ ಮಾಜೀ ಸದಸ್ಯ ಮೀರ್ ಕಾಸಿಮ್ ಹಾಗೂ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರ ನಡುವೆ ನಡೆದ ಪತ್ರ ವ್ಯವಹಾರ ಬಹಳಷ್ಟು ವಿಷಯ ತಿಳಿಸುತ್ತದೆ, ಆಳುವ ಪಕ್ಷದ ಧೋರಣೆ ಹಾಗೂ ಆಚರಣೆಗಳ ಬಗ್ಗೆ ಹಲವು ಅಂಶಗಳ ಬಗ್ಗೆ ಕಾಸಿಮ್ ಟೀಕಿಸಿದ್ದರು. ಇದಕ್ಕೆ ಪ್ರಧಾನ ಮಂತ್ರಿಗಳ ಪ್ರತಿಕ್ರಿಯೆ ಯೇನು ? "ಚಿತ್ರದ ದೋಷಗಳ ಕಡೆಗೆ ಮಾತ್ರ ನೀವು ಗಮನ ಹರಿಸಿದ್ದೀರಿ. ಈ ಮೂಲಕ ನಿಜವಾದ ಪ್ರಗತಿ ಸಾಧನೆಯನ್ನು ಇಲ್ಲಗೊಳಿಸಲು ಚತುರರಾಗಿರುವವರೊಂದಿಗೆ. ಬಹುಶಃ ನಿಮಗರಿವಿಲ್ಲದೆಯೇ, ಸೇರಿಕೊಂಡಿದ್ದೀರಿ. ನಮ್ಮ ನಿಂದಕರು ಸಹಜವಾಗಿಯೇ ಉಪಯೋಗಿಸುವ ನುಡಿಗಟ್ಟುಗಳನ್ನು ನೀವು ಉಪಯೋಗಿಸಿದ್ದೀರಿ: ಅವರ ನಿಲುಮೆಗಳನ್ನೇ ನೀವೂ ತಳೆದಿದ್ದೀರಿ" ಎಂದು ಪ್ರಧಾನ ಮಂತ್ರಿಗಳು ಕಾಸೀಮರ ಮೇಲೆ ಆಪಾದನೆ ಹೊರಿಸಿದ್ದಾರೆ.

ತನ್ನೊಡನೆ ಕಷ್ಟ – ಸುಖದಲ್ಲಿ ಸಹಭಾಗಿಯಾದ, ಆದರೆ ಹೇಳಿದ್ದಕ್ಕೆಲ್ಲಾ ತಲೆಯಾಡಿಸಲು ಒಪ್ಪದಷ್ಟು ಸ್ವತಂತ್ರನಾದ ಒಬ್ಬ ಅಮೂಲ್ಯ ಸಹಯೋಗಿಯ ಬಗ್ಗೆ ಪ್ರಧಾನ ಮಂತ್ರಿಯವರು ಈ ನಿಲುವು ತಳೆದಿರಬೇಕಾದರೆ, ಎ. ಐ. ಸಿ. ಸಿ. ಯಲ್ಲಿ ಯಾವ ಸದಸ್ಯನೂ ಭಿನ್ನ ಅಭಿಪ್ರಾಯ ವ್ಯಕ್ತಪಡಿಸುವ ಧೈರ್ಯ ತೋರಿಸಲಾರ. ಹೀಗೆ ಷಣ್ಮುಖಾನಂದ ಸಭಾಂಗಣ ನಾಯಕರು ತಮ್ಮಲ್ಲಿ ಯಾರು ಎಷ್ಟು ಜೋರಾಗಿ ವಸ್ತ್ಯವು ಘೋಷಣೆಯುವರದಾ ಯಾಗಬಹುದು ಎಂದು ಸ್ಪರ್ಧೆಗಳಿದ ವೇದಿಕೆಯಾಗಿ ಮಾರ್ಪಟ್ಟಿತು.

ತಿಕ್ಕಾಟದ ಮನೋಭಾವ:

"ಆಂತರಿಕ ಒಗ್ಗಟ್ಟು" ಈ ರೀತಿಯಿರುವಾಗ ವಿರೋಧ ಪಕ್ಷಗಳೊಂದಿಗೆ ಘರ್ಷಣೆಯ ನಿಲುವಲ್ಲದೆ ಬೇರೆಯಾವ ನಿಲುವನ್ನೂ ಪ್ರಧಾನ ಮಂತ್ರಿಗಳು ತಳೆಯುವುದು ಸಾಧ್ಯವಿಲ್ಲ. ವಾಸ್ತವದಲ್ಲಿ ಎ. ಐ. ಸಿ. ಸಿ. (ಐ) ಅಧಿವೇಶನದಲ್ಲಿ ಆಕೆಯ ಭಾಷಣಗಳು, ಆಕೆಯ ಸಹಯೋಗಿಗಳ ಭಾಷಣಗಳು ಹಾಗೂ ರಾಜಕೀಯ ಠರಾವಿನ ಸಾರ ಇದೇ ಆಗಿದೆ. ಠರಾವು "ಪಂಜಾಬಿನ ಪರಿಸ್ಥಿತಿಯ ಬಗ್ಗೆ ದೋಷವನ್ನು ಏಕ್‌ದಂ ಅಕಾಲಿದಳದ ಮೇಲೇನೇ ಹೊರಿಸುತ್ತದೆ. ತನ್ನ ಹಠಮಾರೀ ನಿಲುವನ್ನು ಬಿಟ್ಟು ಸುಯೋಗ್ಯ ಪರಿಹಾರಕ್ಕೆ ಪ್ರಯತ್ನಿಸಬೇಕೆಂದು ಅಕಾಲಿದಳಕ್ಕೆ ಹೇಳುತ್ತದೆ ಎನ್ನುತ್ತಾರೆ ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಯ ವರದಿಗಾರರು.

ಆದರೆ ಪಂಜಾಬ್‌ನ ಸಮಸ್ಯೆಗೆ ಸಂಬಂಧಪಟ್ಟಂತೆ ವಾಸ್ತವ ಸಂಗತಿಗಳೇನು ?

ಅಕಾಲಿಗಳು ಎರಡು ತರಹೆಯ ಸಮಸ್ಯೆಗಳನ್ನು ಎತ್ತಿ ತೋರಿಸಿವರು. ಸಿಖ್ಖರೂ ಧಾರ್ಮಿಕ ಕೋಮಿಗೆ ಸಂಬಂದಪಟ್ಟ ಪ್ರಶ್ನೆಗಳು ಮೊದಲನೆಯ ತರಹೆಯ ಸಮಸ್ಯೆಗಳು. ಎರಡನೆಯದು ಸಿಖ್ಖರೂ, ಸಿಖ್ಖರಲ್ಲದವರೂ ಸೇರಿದಂತೆ ಸಮಸ್ತ ಪಂಜಾಬೀ ಜನತೆಯ ಬೇಡಿಕೆಗಳು. ಧಾರ್ಮಿಕ ಬೇಡಿಕೆಗ್ಗಳಿಗೆ ಒಪ್ಪುವಲ್ಲಿ ಸರಕಾರಕ್ಕೆ ಏನೂ ಕಷ್ಟವಾಗಲಿಲ್ಲ. ಈ ಬೇಡಿಕೆಗಳ ಕೆಲವಂಶಗಳ ಬಗ್ಗೆ ಸಾಚಾ ಜಾತ್ಯಾತೀತ ಶಕ್ತಿಗಳಿಗೆ ಭಿನ್ನಾಭಿಪ್ರಾಯವಿತ್ತು. ಆದರೂ ಸರಕಾರದ ಈ ನಿರ್ಧಾರವನ್ನು ಅವು ಒಪ್ಪಿವೆ. ಯಾಕೆಂದರೆ ಇದರಿಂದ ಅಕಾಲಿಗಳೊಂದಿಗಿನ ಸಂಬಂಧದಲ್ಲಿ ಇದ್ದ ಕೆಲವು ಅಡ್ಡಿಗಳನ್ನು ನಿವಾರಿಸಿದಂತಾಯಿತು. ಪರಿಣಾಮವಾಗಿ ಪಂಜಾಬೀ ಜನತೆಯ ಐಕ್ಯತೆಗೆ ದಾರಿಮಾಡಿಕೊಟ್ಟಿತು ಎಂಬ ಕಾರಣದಿಂದ.

ಎರಡನೆಯ ತರಹೆಯ ಸಮಸ್ಯೆಗಳಲ್ಲಿ ಎರಡು ಪ್ರಶ್ನೆಗಳು ಇನ್ನೂ ಪರಿಹಾರ ಕಂಡಿಲ್ಲ. ಅವೆಂದರೆ ಚಂಡೀಗಡದ ಪ್ರಶ್ನೆ ಮತ್ತು ನದಿ ನೀರಿನ ಪ್ರಶ್ನೆ ಚಂಡೀಗಡದ ಬಗ್ಗೆ ಪ್ರಧಾನಮಂತ್ರಿಗಳೇ ಬಹಳ ವರ್ಷಗಳ ಹಿಂದೆ ನೀಡಿದ ಒಂದು ಅವಾರ್ಡ್ ಇದೆ. ಆ ಪ್ರಕಾರ ಚಂಡೀಗಢ ಪಂಜಾಬಿಗೆ ಹೋಗಬೇಕು. ಹರಿಯಾಣಕ್ಕೆ ಹೊಸ ರಾಜಧಾನಿ ಕಟ್ಟಲು ನೆರವು ನೀಡಬೇಕು. ಈ ನಿರ್ಧಾರವನ್ನು ಪಾಲಿಸುವಲ್ಲಿ ಏನೂ ಕಷ್ಟವಾಗಬಾರದಿತ್ತು. ಇದು ಪಂಜಾಬ್ ಮತ್ತು ಹರಿಯಾಣಾ ಎರಡೂ ರಾಜ್ಯಗಳ ಆಕಾಂಕ್ಷೆಗಳನ್ನು ಈಡೇರಿಸುತ್ತಿತ್ತು.

ಇದರ ದಿಗೇ ಈ ಎರಡು ರಾಜ್ಯಗಳ ನಡುವಿನ ಗಡಿ ಪರಿಷ್ಕರಣದ ಪ್ರಶ್ನೆಯೂ ಒಂದು ರೀತಿಯಲ್ಲಿ ಸಂಬಂಧಪಟ್ಟಿದೆ. ಈ ಪ್ರಶ್ನೆಯನ್ನು ಆಯೋಗಕ್ಕೆ ಒಪ್ಪಿಸಬಹುದಾಗಿತ್ತು. ನದಿ ನೀರಿನ ವಿವಾದವನ್ನು ನ್ಯಾಯ ಪಂಚಾಯ್ತಿಗೆ ಒಪ್ಪಿಸಬಹುದಾಗಿತ್ತು. ಸಂಬಂಧಪಟ್ಟ ಶಾಸನದಲ್ಲಿ ಈ ರೀತಿ ಪಂಚಾಯ್ತಿ ನೇಮಿಸಲು ಅವಕಾಶವೂ ಇದೆ. ಈ ಎರಡು ಪರಿಹಾರ ಕಾಣದ ಸಮಸ್ಯೆಗಳನ್ನು ಪರಿಹರಿಸಲು ಈ ಪ್ರಾಮಾಣಿಕ ಮಾರ್ಗ ಏಕೆ ಹಿಡಿಯಲಿಲ್ಲ.

ರಾಜಕೀಯ ದುರುದ್ದೇಶ:

ಅಕಾಲಿ ದಳವೂ ಸೇರಿದಂತೆ ವಿರೋಧ ಪಕ್ಷಗಳೆಲ್ಲಾ ಸರಕಾರ ಕರೆದ ತ್ರಿಪಕ್ಷೀಯ ಸಭೆಯಲ್ಲೂ, ತಮ್ಮದೇ ಆದ ಸಮ್ಮೇಳನದಲ್ಲೂ ಇವೇ ಸಲಹೆಗಳನ್ನು ಮುಂದಿಟ್ಟುವು. ಸರಕಾರ ಇದನ್ನು ಅಂಗೀಕರಿಸಿದಿದ್ದರೆ ಸಮಸ್ಯೆ ತಕ್ಷಣ ಪರಿಹಾರವಾಗುತ್ತಿತ್ತು. ಭಿಂದ್ರನ್‌ವಾಲೆ ನೇತೃತ್ವದ ತೀವ್ರಗಾಮಿಗಳು ಏಕಾಂಗಿಗಳಾಗಿರುತ್ತಿದ್ದರು. ಆದರೆ ಇದು ಪ್ರಧಾನ ಮಂತ್ರಿಗಳ ರಾಜಕೀಯ ಸಮಯ ಸಾಧಕತನದ ಉದ್ದೇಶಗಳಿಗೆ ಅನುಗುಣವಾಗಿರಲಿಲ್ಲ. ಹರ್ಯಾಣದ ಕೆಲವು ಜನ ವಿಭಾಗಗಳ ಸಂಕುಚಿತ ಮನೋಭಾವವನ್ನು ಮತ್ತು ಹಿಂದೂ ಕೋಮುವಾದಿಗಳ ಸಿಖ್ ವಿರೋಧಿ ಭಾವನೆಗಳನ್ನು ಬಳಸಿಕೊಂಡು ಅಕಾಲಿ ದಳವನ್ನು ಬಗ್ಗಿಸುವುದು ಆಕೆಯ ಉದ್ದೇಶವಾಗಿತ್ತು.

ಪ್ರಧಾನ ಮಂತ್ರಿಗಳ ಪಕ್ಷದ ಪ್ರಚಾರಕರು – ಇವರಲ್ಲಿ "ಎಡ ಪಂಥೀಯ ಬುದ್ಧಿ ಜೀವಿಗಳು" ಎಂದೆನಿಸಿಕೊಂಡವರೂ ಇದ್ದಾರೆ – ಅಕಾಲಿ ದಳದಲ್ಲಿ ಮಿತ ಗಾಮಿಗಳೇ ಇಲ್ಲ; ಎಲ್ಲರೂ ತೀವ್ರಗಾಮಿಗಳು ಹಾಗೂ ಕೋಮುವಾದಿಗಳು ಎಂಬ "ಸಿದ್ಧಾಂತ"ವನ್ನು ಪ್ರಚಾರ ಮಾಡಿದರು. ಹೀಗೆ ಮಾಡಿದರೆ ತೀವ್ರಗಾಮಿಗಳ ಬಲೆಗೆ ಬಿದ್ದಂತಾಗುತ್ತದೆ ಎಂದು ವಿರೋಧ ಪಕ್ಷಗಳು ಸರಕಾರವನ್ನು ಎಚ್ಚರಿಸಿದ್ದವು ಕೂಡಾ.

ದುರದೃಷ್ಟವಶಾತ್ ಅದೇ ನಡೆಯಿತು. ರಾಷ್ಟ್ರಪತಿ ಆಡಳಿತ ಆರಂಭವಾದ ಎರಡು ವಾರಗಳು ಕಳೆದು ಹೋದರೂ ಸಮಸ್ಯೆಗೆ ಪರಿಹಾರವೇನೂ ಕಂಡುಬರುತ್ತಿಲ್ಲ. ರಾಷ್ಟ್ರಪತಿ ಆಡಳಿತವಲ್ಲದೆ ಅನ್ಯ ಮಾರ್ಗವಿಲ್ಲ ಎಂದು ಅದನ್ನು ಬೆಂಬಲಿಸಿದವರು ಕೂಡ ಸಮಸ್ಯೆಗೆ ರಾಜಕೀಯ ಪರಿಹಾರ ಹುಡುಕದಿದ್ದರೆ ರಾಷ್ಟ್ರಪತಿ ಆಡಳಿತದಿಂದ ಏನೂ ಉಪಯೋಗವಿಲ್ಲ ಎಂದು ಹೇಳಿದ್ದರು. ನಾವಂತೂ ಸರಕಾರ ತೀವ್ರಗಾಮಿಗಳನ್ನು ಪ್ರತ್ಯೇಕಗೊಳಿಸಿ ಅಕಾಲೀ ನಾಯಕತ್ವದೊಂದಿಗೆ ಇತ್ಯರ್ಥಕ್ಕೆ ಬರುವ ರಾಜಕೀಯ ಮಾರ್ಗ ಅನುಸರಿಸುತ್ತಿದ್ದರೆ ರಾಷ್ಟ್ರಪತಿಆಳ್ವಿಕೆಯ ಅವಶ್ಯಕತೆಯಿರುತ್ತಿರಲಿಲ್ಲ ಎಂದು ಅಭಿಪ್ರಾಯ ಪಡುತ್ತೇವೆ.

ಈಗಿನ ಪ್ರಶ್ನೆಯೆಂದರೆ ಪ್ರಧಾನ ಮಂತ್ರಿಯವರು ಸದ್ಯದ ಘಟ್ಟದಲ್ಲಾದರೂ ಪಂಜಾಬನ್ನು ಒಂದು ವಿಶಾಲ ರಾಷ್ಟ್ರೀಯ ದೃಷ್ಟಿಕೋನದಿಂದ ಪರಿಶೀಲಿಸಿ ವಿರೋಧ ಪಕ್ಷಗಳ ಸಹಕಾರದೊಂದಿಗೆ ರಾಜಕೀಯ ಪರಿಹಾರಕ್ಕೆ ಸಿದ್ಧರಾಗಿದ್ದಾರೆಯೋ ಎಂಬುದೇ ಆಗಿದೆ.

ಸ್ವಾರ್ಥಪರತೆ

ಸ್ವತಃ ಪ್ರಧಾನಮಂತ್ರಿ, ಸಮಸ್ತ ಎ. ಐ. ಸಿ. ಸಿ. (ಐ) ವಿರೋಧಪಕ್ಷಗಳ ಶ್ರೀನಗರ ಸಭೆಯ ಬಗ್ಗೆ ಬಹಳಷ್ಟು ಆತಂಕಗೊಂಡಿದ್ದಾರೆ. ಶ್ರೀನಗರದ ಸಭೆ ಕೇಂದ್ರ–ರಾಜ್ಯ ಸಂಬಂಧಗಳ ಆಳವಾದ ಅಧ್ಯಯನ ನಡೆಸಿತಷ್ಟೆ. ಕೇಂದ್ರ ಸರಕಾರ ಕೂಡ ಈ ವಿಷಯದ ಮಹತ್ವವನ್ನೊಪ್ಪಿಕೊಂಡು ಸರ್ಕಾರಿಯ ಆಯೋಗ ನೇಮಿಸಬೇಕಾಗಿ ಬಂದಿದೆಯೆಂಬುದನ್ನು ಅವರೇಕೆ ಮರೆಯುತ್ತಾರೆ ? ಹಲವು ವಿರೋಧ ಪಕ್ಷಗಳು ಶ್ರೀನಗರದಲ್ಲಿ ಸೇರಿ ಸಮಸ್ಯೆಯನ್ನು ಎಳೆ–ಎಳೆಯಾಗಿ ಚರ್ಚಿಸಿ ಕೆಲವು ಮೂರ್ತ ಸಲಹೆಗಳನ್ನು ಮಂಡಿಸಿದರೆ ಅದು ಇಂದಿರಾಗಾಂಧಿ ಸರಕಾರವನ್ನು ಉರುಳಿಸಲು "ಅನೀತಿಯುತ" ಸಮ್ಮೇಳನ ಎಂದು ಅವರು ಕರೆಯುತ್ತಾರೆ. ಅವರು ಎಷ್ಟೊಂದು ಸ್ವಾರ್ಥಪರರಾಗಿದ್ದಾರೆಂದರೆ ಅವರ ಸರಕಾರವನ್ನು ಉರುಳಿಸಲಿಕ್ಕಲ್ಲದೆ ಬೇರಾವುದಕ್ಕಾದರೂ ಎರಡು ಅಥವಾ ಹೆಚ್ಚು ಪಕ್ಷಗಳು ಒಟ್ಟು ಸೇರಬಹುದು ಎಂದು ಯೋಚಿಸುವುದೂ ಅವರಿಗೆ ಸಾಧ್ಯವಿಲ್ಲದಾಗಿದೆ.

ಪ್ರಧಾನಮಂತ್ರಿಗಳು ಹಾಗೂ ಎ.ಐ.ಸಿ.ಸಿ.ಯ ಆಕೆಯ ಸಹಯೋಗಿಗಳು, ಶಕ್ತಿಶಾಲೀ ಕೇಂದ್ರ ಹಾಗೂ ದೇಶದ ಐಕ್ಯತೆಯನ್ನು ಕಾಪಾಡುವುದರ ಅವಶ್ಯಕತೆಯ ಬಗ್ಗೆ ಅಬ್ಬರದ ಮಾತುಗಳನ್ನಾಡಿದ್ದಾರೆ. ಆದರೆ ಅವರು ಒಂದು ಪ್ರಶ್ನೆಯನ್ನು ಉತ್ತರಿಸಬೇಕಾಗಿದೆ. ಈಗ ರಾಷ್ಟ್ರೀಯ ಐಕ್ಯತೆ ಪ್ರಹಾರಕ್ಕೆ ಒಳಗಾಗಿರುವುದು ಸಂವಿಧಾನ ದುರ್ಬಲ ಕೇಂದ್ರಕ್ಕಷ್ಟೆ ಅವಕಾಶವೊದಗಿಸಿದೆ ಎಂಬುದರಿಂದಾಗಿಯೇನು ?– ಇದಕ್ಕೆ ವ್ಯತಿರಿಕ್ತವಾಗಿ, ಸಂವಿಧಾನದಲ್ಲಿ ಅವಕಾಶಮಾಡಿಕೊಟ್ಟ ಶಕ್ತಿಶಾಲೀ ಕೇಂದ್ರವಲ್ಲದೆ, ರಾಜ್ಯಗಳ ಅಧಿಕಾರ ಕ್ಷೇತ್ರದಲ್ಲಿ ಸತತ ಅತಿಕ್ರಮಣ ನಡೆಸಿ ಕೇಂದ್ರ ಇನ್ನಷ್ಟು ಬಲಶಾಲಿಯಾಗಿಲ್ಲವೇ ? ಆದರೂ ಈ ಸರ್ವಶಕ್ತ ಕೇಂದ್ರ ಕೋಮುದಂಗೆಗಳನ್ನು ಹರಿಜನ, ಗಿರಿಜನ ಮತ್ತು ಇತರ ಹಿಂದುಳಿದ ವರ್ಗಗಳ ಮೇಲೆ ಮತ್ತೆ ಮತ್ತೆ ನಡೆಯುತ್ತಿರುವ ಹಲ್ಲೆಗಳನ್ನು ತಡೆಯಲು ಏಕೆ ಅಸಮರ್ಥವಾಗುತ್ತಿದೆ ? ಸಂವಿಧಾನದ ಯಾವುದಾದರೂ ಅಂಶ ಕೇಂದ್ರವನ್ನು ದುರ್ಬಲಗೊಳಿಸಿದ್ದರಿಂದಾಗಿ ಹೀಗಾಗುತ್ತಿದೆಯೇ ?

ಪ್ರಮುಖ ವ್ಯತ್ಯಾಸ

ಶ್ರೀನಗರದಲ್ಲಿ ಕೇಂದ್ರ ರಾಜ್ಯ ಸಂಬಂಧಗಳನ್ನು ಚರ್ಚಿಸಲು ಸೇರಿದ್ದವರು ದೇಶದ ಐಕ್ಯತೆಯನ್ನು ಕಾಪಾಡಬೇಕು ಸಾಮ್ರಾಜ್ಯಶಾಹಿಗಳ ನೇರ ಅಥವ ಪರೋಕ್ಷ ಆಕ್ರಮಣವನ್ನು ಎದುರಿಸಲು ಸಿದ್ಧವಿರುವಂತೆ ರಕ್ಷಣಾ ವ್ಯವಸ್ಥೆ ಇರಬೇಕೆಂದು ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯನ್ನು ಕೇಂದ್ರೀಯವಾಗಿ ಯೋಜಿತಗೊಂಡ ವ್ಯವಸ್ಥೆಯಲ್ಲಿ ಬೆಳೆಸಬೇಕೆಂದು ಆಶಿಸುವುದರಲ್ಲಿ ಯಾರಿಗೂ ಕಮ್ಮಿಯಿಲ್ಲ. ಶ್ರೀನಗರ ಸಭೆಯಲ್ಲಿ ಭಾಗವಹಿಸಿದವರಿಗೂ, ಕಾಂಗ್ರೆಸ್ (ಐ) ನಾಯಕರಿಗೂ ಇರುವ ವ್ಯತ್ಯಾಸವೇನೆಂದರೆ ಶ್ರೀನಗರದಲ್ಲಿ ಸೇರಿದ್ದವರು ರಾಜ್ಯಗಳಿಗೆ ವಹಿಸಿಕೊಟ್ಟಿರುವ ಕ್ಷೇತ್ರಗಳಲ್ಲಿ ಸಾಧ್ಯವಾದಷ್ಟು ಹೆಚ್ಚಿನ ಸ್ವಾಯತ್ತತೆ ನೀಡಿದರೆ ಮಾತ್ರ ಕೇಂದ್ರ ತನಗೆ ವಹಿಸಿಕೊಟ್ಟ ಜವಾಬ್ದಾರಿಗಳನ್ನು ನಿರ್ವಹಿಸುವಷ್ಟು ಶಕ್ತಿಶಾಲಿಯಾಗಬಲ್ಲರು ಎಂಬ ನಿರ್ಧಾರಕ್ಕೆ ತಮ್ಮ ಅನುಭವದಿಂದ ಬಂದಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ರಾಜ್ಯಗಳನ್ನು ನಿಸ್ಸಹಾಯಕರನ್ನಾಗಿಸಿ ಸಂಪೂರ್ಣವಾಗಿ ಕೇಂದ್ರದ ಮೇಲೆ ಅವಲಂಬಿಸುವಂತೆ ಮಾಡಿದರೆ ಮಾತ್ರ ಕೇಂದ್ರವೆಷ್ಟು ಬಲಯುತಗೊಳಿಸಬಹುದು ಎಂದು ಕಾಂಗ್ರೆಸ್ (ಐ) ನಾಯಕರು ಭಾವಿಸುತ್ತಾರೆ.

ಸದ್ಯದ ಈ ತೀವ್ರ ಪ್ರಶ್ನೆಯ ಬಗ್ಗೆ ವಿರೋದ ಪಕ್ಷಗಳೊಂದಿಗೆ ಚರ್ಚೆ ನಡೆದಲು ಕಾಂಗ್ರೆಸ್ (ಐ) ನಾಯಕರು ಏಕೆ ನಿರಾಕರಿಸುತ್ತಿದ್ದಾರೆ ? ಯಾಕೆಂದರೆ ಜನರ ನಡುವೆ ಮುಕ್ತ ಚರ್ಚೆ ನಡೆಸಿದರೆ ಅದು ಅವರ ಮಟ್ಟಿಗೆ ಕಾಂಗ್ರೆಸ್ (ಇಂದಿರಾ) ಪಕ್ಷದ ವಿಶಿಷ್ಟ "ಸಂಸ್ಕೃತಿ"ಯ ಮೂಲಕ್ಕೆ ಏಟು ಕೊಟ್ಟಂತೆ ; ಒಂದು ವ್ಯಕ್ತಿಗೆ ನಿಷ್ಠೆಯೇ ಆ ಪಕ್ಷದ ಪ್ರತೀಕ.

ಎ.ಐ.ಸಿ.ಸಿ. ಕಲಾಪಗಳ ಅತ್ಯಂತ ತಮಾಷೆಯ ಭಾಗವೆಂದರೆ ಒಂದೆಡೆ ಅಲ್ಲಿ ಅಂಗೀಕಾರಗಳಿಂದ ರಾಜಕೀಯ ನಿರ್ಣಯ, ನಡೆದ ಭಾಷಣಗಳ ಸಾರಸರ್ವಸ್ವ ವಿರೋಧ ಪಕ್ಷಗಳ ದ್ವೇಷಪೂರ್ಣ ಟೀಕೆಯೇ ಆಗಿದ್ದರೆ ಇನ್ನೊಂದೆಡೆ ರಾಷ್ಟ್ರೀಯ ಐಕ್ಯತೆ ಮತ್ತು, ರಕ್ಷಣೆ, ಜಾತ್ಯಾತೀಯತೆ, ಯೋಜನೆ ಮತ್ತು ಸ್ವಾವಲಂಬನೆ, ಅಲಿಪ್ತತೆ ಮತ್ತು ಜಾಗತಿಕ ಶಾಂತಿ ಮುಂತಾದ ವಿಷಯಗಳ ಬಗ್ಗೆ ಒಮ್ಮತಾಭಿಪ್ರಾಯಕ್ಕೆ ಅದು ಕರೆನೀಡಿದೆ !

ಒಮ್ಮತಾಭಿಪ್ರಾಯದ ಅರ್ಥವೇನು !

ಈ ವಿಷಯಗಳಲ್ಲಿ ಪ್ರತಿಯೊಂದರ ಬಗ್ಗೆಯೂ ಒಮ್ಮತಾಭಿಪ್ರಾಯ ಮಾಡಬೇಕಾದರೆ ಮುಕ್ತ ಚರ್ಚೆ ನಡೆಯುವುದು ಅಗತ್ಯವೆಂಬುದು ಸ್ಪಷ್ಟ ಯಾಕೆಂದರೆ ಆಳುವ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವಣ ನೀತಿಯಲ್ಲಿ ಪ್ರತ್ಯೇಕ ... ಆಳುವ ಪಕ್ಷದ

[7ನೇ ಪುಟ ನೋಡಿ]

ವಿಶೇಷ ವರದಿ

ಜೆ. ಎನ್. ಯು. ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ

ಎಸ್. ಎಫ್. ಐ. ಜಯಭೇರಿ

—ಅಶೋಕ ಶೆಟ್ಟರ್

ದೆಹಲಿಯ ಜವಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರಸಕ್ತ ವರ್ಷದ ವಿದ್ಯಾರ್ಥಿ ಸಂಘಕ್ಕೆ ಅಕ್ಟೋಬರ್ 21ರಂದು ನಡೆದ ಚುನಾವಣೆಯಲ್ಲಿ ಎಲ್ಲ ನಾಲ್ಕು ಪದಾಧಿಕಾರಿ ಸ್ಥಾನಗಳನ್ನು ಎಸ್. ಎಫ್. ಐ. ನ ಸಂಗಾತಿಗಳು ಗೆದ್ದುಕೊಂಡಿದ್ದಾರೆ. ಈ ವಿಶ್ವವಿದ್ಯಾಲಯದ ಹತ್ತು ವರ್ಷಗಳ ಇತಿಹಾಸದಲ್ಲಿ ಮಹಿಳೆಯೊಬ್ಬರು ಅಧ್ಯಕ್ಷ ಪದಕ್ಕೆ ಆಯ್ಕೆಯಾಗಿರುವುದು ಇದು ಮೊದಲ ಸಲ. ಈ ಸ್ಥಾನ ಪ್ರಾಪ್ತವಾಗಿರುವುದು ರಶಿಯನ್ ಸಾಹಿತ್ಯ ವಿಮರ್ಶೆಯ ಕುರಿತು ಪಿ. ಹೆಚ್. ಡಿ. ಮಾಡುತ್ತಿರುವ ಕಾಮ್ರೇಡ್ ರಶ್ಮಿ ದೊರೆಸ್ವಾಮಿಯವರಿಗೆ. 28 ವರ್ಷ ವಯಸ್ಸಿನ, ಹೋರಾಟಶೀಲ ಮನೋವೃತ್ತಿಯ ಸಂಗಾತಿ ರಶ್ಮಿ ಕನ್ನಡತಿ ಎಂಬುದೊಂದು ವಿಶೇಷ. ತಮ್ಮ ಪ್ರತಿಸ್ಪರ್ಧಿ ಸಮಾಜವಾದಿ ಯುವಜನ ಸಭಾ ಹಾಗೂ ಮುಕ್ತ ಚಿಂತಕ (Free Thinker) ಒಕ್ಕೂಟದ ಅಭ್ಯರ್ಥಿಗಿಂತ ರಶ್ಮಿ 112 ಮತಗಳನ್ನು ಹೆಚ್ಚು ಪಡೆದು ಆಯ್ಕೆಯಾಗಿದ್ದಾರೆ. ಎಸ್.ಎಫ್.ಐ.ನ ಇನ್ನು ಮೂವರು ಅಭ್ಯರ್ಥಿಗಳಾದ ಕಾ॥ ಅನ್ವರ್ ಆಲಂ ಕಾ॥ ಟಿ. ಕೆ. ಅರುಣ್ ಮತ್ತು ಕಾ॥ ಜಿ. ವಿ. ರಮಣಾ ಕ್ರಮವಾಗಿ ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಹಾಗೂ ಸಹ ಕಾರ್ಯದರ್ಶಿ ಪದಗಳಿಗೆ ಆಯ್ಕೆಯಾಗಿದ್ದಾರೆ. ವಿರೋಧಿ ಅಭ್ಯರ್ಥಿಗಳಿಗಿಂತ ಇವರು ಗಳಿಸಿದ ಹೆಚ್ಚಿನ ಮತಗಳು ಅನುಕ್ರಮವಾಗಿ 86, 201 ಮತ್ತು 171. ಈ ನಾಲ್ವರಲ್ಲದೇ 19 ಸದಸ್ಯರ ಕೌನ್ಸಿಲ್‌ನಲ್ಲಿ 9 ಸ್ಥಾನಗಳನ್ನು ಎಸ್.ಎಫ್.ಐ. ಸಂಗಾತಿಗಳು ಗೆದ್ದಿದ್ದಾರೆ (ಭಾಷಾ ಅಧ್ಯಯನ ವಿಭಾಗದ ಎಲ್ಲ 5 ಸ್ಥಾನಗಳು, ಸಮಾಜ ವಿಜ್ಞಾನ ಅಧ್ಯಯನ ವಿಭಾಗದ 5 ರಲ್ಲಿ 4) ಆರ್.ಎಸ್.ಎಸ್. ನ ನೆಲೆಯಾದ ಕಂಪ್ಯೂಟರ್ ಹಾಗೂ ಸಿಸ್ಟಮ್ಸ್ ಸೈನ್ಸ್ ವಿಭಾಗದಲ್ಲೇ ಎಸ್.ಎಫ್.ಐ. ಬೆಂಬಲಿತ ಅಭ್ಯರ್ಥಿ ಶ್ರೀ ಆದಿಶೇಷು ಅವರು ABVP ಅಭ್ಯರ್ಥಿಯನ್ನು ಸೋಲಿಸಿದ್ದೂ ಗಮನಾರ್ಹವಾಗಿದೆ.

ಚುನಾವಣೆಗಳ ಹಿನ್ನೆಲೆ :

ಕಳೆದ ಹತ್ತು ವರ್ಷಗಳಿಂದ ನಿರಂತರವಾಗಿ ಬಹುಮತ ಪಡೆಯುತ್ತ ಬಂದಿದ್ದ ಎಸ್.ಎಫ್.ಐ. ಅನ್ನು ಸೋಲಿಸಲು ಕಳೆದ ವರ್ಷದ ಚುನಾವಣೆಗಳಲ್ಲಿ ನಕ್ಸಲೈಟ್ ಗುಂಪುಗಳನ್ನು ಒಳಗೊಂಡು ಎಲ್ಲಾ ವಿದ್ಯಾರ್ಥಿ ಸಂಘಟನೆಗಳು ಒದಾಗಿದ್ದವು. ಇದರಿಂದಾಗಿ ಸಾಧ್ಯವಾದ ಸಂಖ್ಯಾತ್ಮಕ ಹೆಚ್ಚಳದ ಲಾಭ ಪಡೆದು ವಿದ್ಯಾರ್ಥಿ ಸಂಘದ ಕೌನ್ಸಿಲ್‌ನಲ್ಲಿ ಸಮಾಜವಾದಿ-ಮುಕ್ತ ಚಿಂತಕ ಒಕ್ಕೂಟ ಬಹುಮತ ಹೊಂದಿತ್ತು. ಪ್ರದಾನ ಕಾರ್ಯದರ್ಶಿ ಸಹ ಕಾರ್ಯದರ್ಶಿ ಸ್ಥಾನೆಗಳು ಎಸ್.ಎಫ್.ಐ- ಎ.ಐ. ಎಸ್. ಎಫ್. ಒಕ್ಕೂಟಕ್ಕೆ ಲಭ್ಯವಾಗಿದ್ದರೂ ಅಧ್ಯಕ್ಷ ಪದ ಸಮಾಜವಾದಿಗಳಿಗೆ ಲಭ್ಯವಾಗಿತ್ತು. ಕಳೆದ ವರ್ಷದುದ್ದಕ್ಕೂ ಸಮಾಜವಾದಿ ಧುರೀಣತ್ವವು ವಿಶ್ವವಿದ್ಯಾಲಯದ ಆವರಣದ ಸಮಸ್ಯೆಗಳನ್ನು ಕೈಗೆತ್ತಿಕೊಂಡ ರೀತಿ, ಅದರ ವಿವೇಕಹೀನ ಧೀರೋದಾತ್ತತೆ ಹಾಗೂ ಅಸಮರ್ಥ ಮತ್ತು ಬೇಜವಾಬ್ದಾರಿ ರಾಜಕಾರಣವು ಅರವತ್ತರ ದಶಕದಲ್ಲಿ ಉತ್ತರ ಭಾರತದ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಅವರು ನಡೆಸಿದ ರಾಜಕಾರಣದಿಂದ ಭಿನ್ನವಾಗಿರಲಿಲ್ಲ. (ಅವರು ಪ್ರಾತಿನಿಧ್ಯ ಕಳೆದುಕೊಂಡ ನಂತರ ಬಹುಪಾಲು ವಿಶ್ವವಿದ್ಯಾಲಯಗಳ ವಿದ್ಯಾರ್ಥಿ ಸಂಘಗಳು ABVP ಅಥವ NSUI (I) ಗಳ ಕೈ ಸೇರಿವೆ.) ಅವರು ಜೆ.ಎನ್.ಯು. ವಿದ್ಯಾರ್ಥಿ ಸಂಘದಲ್ಲಿ ಪ್ರಾಬಲ್ಯ ಹೊಂದಿದ ಒಂದೇ ಒಂದು ವರ್ಷದ ಅವಧಿಯಲ್ಲಿ ಇಲ್ಲಿಯ ವಿದ್ಯಾರ್ಥಿಗಳ ಚಳುವಳಿಯ ಮೇಲೆ ಕೂಡ ಕಳವಳ ಉಂಟು ಮಾಡುವಂತ ಪರಿಣಾಮವಾಗಿವೆ. ABVP, NSUI (I) ಪ್ರಥಮಬಾರಿಗೆ ತಲೆ ಎತ್ತಿರುವುದಲ್ಲದೆ ಚುನಾವಣೆಗಳಲ್ಲಿ ಸ್ಪರ್ಧಿಸುವ ಧೈರ್ಯವನ್ನು ತೋರಿವೆ. ಈ ದುರ್ಬಲ ಧುರೀಣತ್ವದ ಲಾಭ ಪಡೆದ ಕಾಂಗ್ರೆಸ್ ನೇರವಾಗಿ ಇಂದು ವಿಶ್ವವಿದ್ಯಾಲಯದ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡತೊಡಗಿದೆ. ಸಮಾಜವಾದಿ "ವೈಖರಿ"ಯ ಜಾಣ್ಮೆ ರಹಿತ ಧುರೀಣತ್ವದಿಂದಾಗಿ ಕಳೆದ ಮೇ ತಿಂಗಳು ಬಂಧಿತರಾಗಿ ತಿಹಾರ್ ಜೇಲಿನಲ್ಲಿ ಇಡಲ್ಪಟ್ಟಿದ್ದ (50 ವಿದ್ಯಾರ್ಥಿನಿಯರನ್ನೂ ಒಳಗೊಂಡು) 375 ವಿದ್ಯಾರ್ಥಿಗಳ ಮೇಲೆ ಉಪಕುಲಪತಿಯ ಕೊಲೆಯ ಯತ್ನ ಇತ್ಯಾದಿ 17 ಗಂಭೀರ ಕ್ರಿಮಿನಲ್ ಆಪಾದನೆಗಳನ್ನು ದೆಹಲಿ ಪೋಲಿಸರು ದಾಖಿಲು ಮಾಡಿದ್ದಾರೆ. ರಾಜಕೀಯ ಕಾರಣಗಳಿಂದಾಗಿ 18 ವಿದ್ಯಾರ್ಥಿಗಳು ಖೊಟ್ಟಿ ವಿಚಾರಣಾ ಸಮಿತಿಯೊಂದನ್ನು ಎದುರಿಸುತ್ತಿದ್ದಾರೆ. ವಿದ್ಯಾರ್ಥಿ ಸಂಘದ ಅಧ್ಯಕ್ಷ – ಕಾರ್ಯದರ್ಶಿ ಹಾಗೂ ಇನ್ನೊರ್ವ ವಿದ್ಯಾರ್ಥಿ ಮೂರು ವರ್ಷಗಳವರೆಗೆ ವಿಶ್ವವಿದ್ಯಾಲಯದಿಂದ ಹೊರಹಾಕಲ್ಪಟ್ಟಿದ್ದಾರೆ. ಇತ್ತೀಚೆಗೆ 13 ವಿದ್ಯಾರ್ಥಿ–ವಿದ್ಯಾರ್ಥಿನಿಯರು ಸಸ್ಪೆಂಡ್ ಮಾಡಲ್ಪಟ್ಟಿದ್ದಾರೆ. ಇಂತ ಬಿಕ್ಕಟ್ಟಿನ ಸಂದರ್ಭದಲ್ಲಿ ಕೂಡ ಸಮಾಜವಾದಿ ಯುವಜನ ಸಭಾ ಹಾಗೂ ಮುಕ್ತಚಿಂತಕ ಒಕ್ಕೂಟದಿಂದ ಕಳೆದ ವರ್ಷ ಆಯ್ಕೆಯಾಗಿದ್ದ ಉಪಾಧ್ಯಕ್ಷ ಹಾಗೂ ಕೌನ್ಸಿಲರ್‌ಗಳು ಸರಿಯಾಗಿ ಕೌನ್ಸಿಲ್ ಮೀಟಿಂಗ್‌ಗಳಲ್ಲಿ ಹಾಜರಾಗುತ್ತಿರಲಿಲ್ಲವೆನ್ನುವುದು ವಿದ್ಯಾರ್ಥಿ ಹೋರಾಟದ ಕುರಿತು ಅವರಿಗಿದ್ದ "ಕಳಕಳಿ"ಎಷ್ಟೆಂಬುದಕ್ಕೆ ಸಾಕ್ಷಿಯಾಗಿದೆ.

ಎ.ಐ.ಎಸ್.ಎಫ್. ಸೋಲು :

ಕಳೆದ ವರ್ಷದ ಚುನಾವಣೆಯಲ್ಲಿ ಎಸ್.ಎಫ್.ಐ. ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದ ಈ ಸಂಘಟನೇ ವಿದ್ಯಾರ್ಥಿ ಸಂಘದ ಕೌನ್ಸಿಲ್‌ನಲ್ಲಿ ಪ್ರಧಾನ ಕಾರ್ಯದರ್ಶಿಯನ್ನೊಳಗೊಂಡು ನಾಲ್ವರು ಸದಸ್ಯರನ್ನು ಹೊಂದಿತ್ತು. ಕಳೆದ ವರ್ಷದ ಧುರೀಣತ್ವದ ಬೇಜವಾಬ್ದಾರಿ ಧೋರಣೆಗಳನ್ನು ಬೆಂಬಲಿಸುವ ಇಲ್ಲವೇ ತಟಸ್ಥವಾಗಿರುವ ಎ.ಐ.ಎಸ್.ಎಫ್.ನ ನಿಲುವು ಮಾರ್ಕ್ಸ್‌ವಾದಿ ವಿದ್ಯಾರ್ಥಿ ಸಂಘಟನೆಗೆ ಶೋಭಿಸುವಂಥದಾಗಿರಲಿಲ್ಲ. ಕಳೆದ ವರ್ಷದ ಧುರೀಣತ್ವದ ಸ್ವರೂಪ ಹಾಗೂ ಚಟುವಟಿಕೆಗಳ ವೈಖರಿಯ ಕುರಿತು ಖಚಿತವಾದ ನಿಲುವನ್ನು ತಳೆಯಬೇಕೆಂದು ಹಾಗೂ ವರ್ಷದುದ್ದಕ್ಕೂ ತಾನು ತಳೆದ ನಿಲುವುಗಳಲ್ಲಿ ಆಕ್ಷೇಪಾರ್ಹವಾಗಿದ್ದ ಕೆಲವನ್ನು ಪುನರ್ವಿಮರ್ಶಿಸಿಕೊಳ್ಳಬೇಕೆಂದು AISF ಅನ್ನು ಕೇಳಿ ಅದು ಇವುಗಳಿಗೆ ಒಪ್ಪಿದರೆ ಮಾತ್ರ ಸಂಧಾನದ ಮಾತುಕತೆಗಳನ್ನು ಮುಂದುವರಿಸಬೇಕೆಂದು ಜೆ.ಎನ್.ಯು., ಎಸ್. ಎಫ್. ಐ. ಘಟಕದ ಎಲ್ಲಾ ಹಾಸ್ಟೆಲ್ ಸಮಿತಿಗಳು ಹಾಗೂ ಕಾರ್ಯಕಾರಿ ಸಮಿತಿ

[6ನೇ ಪುಟ ನೋಡಿ]

ಹೈದರಾಬಾದ್

ಕೋಮುವಾದೀ ಶಕ್ತಿಗಳನ್ನು ನಿರ್ಮೂಲ ಮಾಡಲು ಪ್ರತಿಜ್ಞೆ

ಕೆಲವು ದಿನಗಳ ಹಿಂದೆ ಹೈದರಾಬಾದ್ ಕೋಮು ದ್ವೇಷದ ಜ್ವಾಲೆಗೊಳಗಾಗಿತ್ತು. ಜನರ ಗಮನವನ್ನು ಬಡತನ, ನಿರುದ್ಯೋಗ, ಹಿಂದುಳಿಕೆ ಇತ್ಯಾದಿ ಮೂಲಭೂತ ಸಮಸ್ಯೆಗಳಿಂದ ಬೇರೆಡೆ ಸೆಳೆಯುವ ಸಲುವಾಗಿ ಕೋಮುದ್ವೇಷ ಹಬ್ಬಿಸಿ ಕೋಮುಗಲಭೆ ನಡೆಸಿ ಅಮಾಯಕರನ್ನು ಬಲಿ ತೆಗೆದುಕೊಳ್ಳಲು ಕೋಮು ಶಕ್ತಿಗಳು ಹೈದರಾಬಾದಿನಲ್ಲಿ ಮಾತ್ರವಲ್ಲ, ಇಂತಹ ಹಲವೆಡೆಗಳಲ್ಲೂ ಪ್ರಯತ್ನಿಸಿವೆ. ಹೈದರಾಬಾದ್‌ನ 'ಜಾತ್ಯತೀತ ನಾಗರಿಕರ ಶಾಂತಿ ಸಮಿತಿ' ಈ ಕೋಮು ದ್ವೇಷದ ವಿರುದ್ಧ ಅಕ್ಟೋಬರ್ 9 ರಂದು ಒಂದು ಸಮಾವೇಶ ನಡೆಸಿತು. ಸಿ.ಪಿ.ಐ.(ಎಂ.), ಸಿ.ಪಿ.ಐ., ತೆಲುಗು ದೇಶಂ, ಕಾಂಗ್ರೆಸ್ (ಐ.), ಕಾಂಗ್ರೆಸ್ (ಎಸ್.), ಡಿ.ಎಸ್.ಪಿ., ಜನತಾ ಪಕ್ಷ ರಿಪಬ್ಲಿಕನ್ ಪಕ್ಷಗಳ ನಾಯಕರು ಹಾಗೂ ಇತರ ಕೆಲವು ಪ್ರತಿಷ್ಠಿತ ಬುದ್ಧಿಜೀವಿಗಳು ಈ ಸಮಾವೇಶದಲ್ಲಿ ಕೋಮು ಶಕ್ತಿಗಳ ಭಯಾನಕ ಕುತಂತ್ರಗಳನ್ನು ಬಯಲಿಗೆಳೆಯಬೇಕು ಹಾಗೂ ಜಾತ್ಯತೀತ ತತ್ವಕ್ಕೆ ಬದ್ಧರಾದ ಎಲ್ಲಾ ಪಕ್ಷಗಳ ಜನರೂ ಒಂದೇ ವೇದಿಕೆಯ ಮೇಲೆ ಕಲೆತು ಜನತೆಗೆ ಜಾತ್ಯತೀತ ವಿಧಾನದಲ್ಲಿ ಕೋಮು ಸೌಹಾರ್ದಲ ರಕ್ಷಿಸುವ ಬಗ್ಗೆ ಶಿಕ್ಷಣ ನೀಡಬೇಕೆಂದು ಒತ್ತಿ ಹೇಳಿದರು. ಸಮಾವೇಶ ಅಂಗೀಕರಿಸಿದ ಘೋಷಣೆ ಹೀಗಿದೆ.

"ಕೋಮು ಕಲಹದ ನೆಪದಲ್ಲಿ ಅಮಾಯಕ ನಾಗರಿಕರನ್ನು ಕೊಲ್ಲುವ, ಗಾಯಗೊಳಿಸುವ ಘಟನೆಗಳು ಹೆಚ್ಚುತ್ತಿರುವುದರಿಂದ ಶಾಂತಿ ಹಾಗೂ ಪ್ರಗತಿ ಹೆಚ್ಚೆಚ್ಚು ಅಪಾಯಕ್ಕೊಳಗಾಗುತ್ತಿರುವುದರ ಬಗ್ಗೆ ಅತೀವ ಆತಂಕಗೊಂಡಿರುವ, ವಿವಿಧ ರಾಜಕೀಯ ಪಕ್ಷಗಳು ಹಾಗೂ ಪಂಥಗಳಿಗೆ ಸೇರಿದ ಹೈದರಾಬಾದಿನ ನಾಗರಿಕರಾದ ನಾವೆಲ್ಲಾ ಈ ಸವಾಲನ್ನು ಸಾಮೂಹಿಕವಾಗಿ ಎದುರಿಸಲು "ಜಾತ್ಯತೀತ ನಾಗರಿಕರ ಶಾಂತಿ ಸಮಿತಿ" ಎಂಬ ಹೆಸರಿನ ಸಂಘಟನೆ ರಚಿಸಿಕೊಳ್ಳಲು ನಿರ್ಣಯಿಸಿದ್ದೇವೆ.

ಕಲಹ ಹಾಗೂ ಗಲಭೆಗಳಲ್ಲಿ ಕೆಲವ ದಕ್ಕೆ ದುರುದ್ದೇಶಪೂರ್ಣವಾಗಿ ಹರಡಿಸಿದ ತಪ್ಪು ಭಾವನೆಗಳು ಹಾಗೂ ಕಾಲ್ಪನಿಕ ಕುಂದುಕೊರತೆಗಳು ಕಾರಣ. ಇವನ್ನು ಕೋಮುಶಕ್ತಿಗಳು ಸುಲಭವಾಗಿ ದುರುಪಯೋಗಪಡಿಸಿಕೊಳ್ಳುತ್ತವೆ. ಇದುವರೆಗೆ ಇದನ್ನು ಎದುರಿಸುವ ಸಲುವಾಗಿ ಧರ್ಮಾತೀತ ಶಕ್ತಿಗಳನ್ನು ಬಲಪಡಿಸಲು ಅಥವಾ ನಿಜ ವಿಷಯ ತಿಳಿಯದವರಿಗೆ ನಮ್ಮ ಮೂಲಭೂತ ಸಮಸ್ಯೆಯೆಂದರೆ ಬಡತನ ಮತ್ತು ಹಿಂದುಳಿಕೆ, ಈ ಸಮಸ್ಯೆಗೆ ಪರಿಹಾರ ಜಾತ್ಯತೀತ ಮೌಲ್ಯಗಳಿಲ್ಲದೆ, ಧಾರ್ಮಿಕ ಸಹನಶೀಲತೆಯಿಲ್ಲದೆ, ಸಾಮಾಜಿಕ ನ್ಯಾಯದ ತತ್ವ ಪಾಲಿಸದೆ ಪರಿಹಾರ ಕಾಣುವುದು ಸಾಧ್ಯವಿಲ್ಲ ಎಂಬ ಸಂದೇಶ ತಲುಪಿಸಲು ಗಂಭೀರ ಪ್ರಯತ್ನ ನಡೆಸಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಅಲ್ಪಕಾಲೀನ ರಾಜಕೀಯ ಪ್ರಯೋಜನಕ್ಕಾಗಿ ಕೋಮು ಶಕ್ತಿಗಳೊಂದಿಗೆ ಅಪವಿತ್ರ ಮೈತ್ರಿ ಮಾಡಿಕೊಳ್ಳಲಾಗಿದೆ. ಆ ಮೂಲಕ ಈ ಶಕ್ತಿಗಳಿಗೆ ಜೀವದಾನ ಹಾಗೂ ಗೌರವದಾನ ಮಾಡಲಾಗಿದೆ. ಈ ರಾಜಕೀಯ ಸಂದರ್ಭಸಾಧಕತನಕ್ಕೆ ನಾವೀಗ ಭಾರೀ ಬೆಲೆ ತೆರುತ್ತಿದ್ದೇವೆ.

ನಮ್ಮ ದೇಶ ಅಸಂಖ್ಯಾತ ಪಂಥಗಳ ತೊಟ್ಟಿಲು ; ಅತ್ಯಂತ ದೊಡ್ಡ ಸಂಕೀರ್ಣ ಸಮಾಜಕ್ಕೆ ಆಸರೆನೀಡಿದ ಹೆಮ್ಮೆ ನಮ್ಮದು ಎಂಬುದನ್ನು ಮರೆಯದಿರೋಣ. ಸಹನೆ ಹಾಗೂ ಸಾಮರಸ್ಯ ನಮ್ಮ ನಾಗರೀಕತೆಯ ವಿಶಿಷ್ಟ ಲಕ್ಷಣಗಳು.

ದಖ್ಖಣದ ಮಧ್ಯದಲ್ಲಿರುವ ಹೈದರಬಾದ್ ನಗರ ಉತ್ತರ ಮತ್ತು ದಕ್ಷಿಣಗಳ ನಡುವಿನ ಸೇತುವೆ ಹಾಗೂ ಸಾಂಸ್ಕೃತಿಕ ಸಾಮರಸ್ಯದ ತವರು. ಆದರೆ ಇತ್ತೀಚಿನ ವರ್ಷಗಳಲ್ಲಿ ಪ್ರಜಾಪ್ರಭುತ್ವ, ಜಾತ್ಯಾತೀತ ತತ್ವ ಹಾಗೂ ಸಮಾಜವಾದಕ್ಕೆ ವಿರುದ್ಧವಾಗಿರುವ ಕೆಲವು ಶಕ್ತಿಗಳು ಸಾಮಾಜಿಕ ಸೌಮ್ಯರಸವನ್ನು ಕೆಡಿಸಲು ಸಾಮಾಜಿಕ ಬದಲಾವಣೆಯತ್ತ ಪ್ರಗತಿಯನ್ನು ತಡೆಯಲು ದೃಢಪ್ರಯತ್ನ ನಡೆಸುತ್ತಿವೆ. ಆದ್ದರಿಂದ ಸದ್ಯದ ಸ್ಥಿತಿಯನ್ನು ಕೇವಲ ಕಾನೂನು ಮತ್ತು ವ್ಯವಸ್ಥೆಯ ಸಮಸ್ಯೆಯೆಂದು ನಾವು ಪರಿಗಣಿಸಲು ಸಾಧ್ಯವಿಲ್ಲ.

ಜಾತ್ಯಾತೀತ ತತ್ವದ ಆಧಾರವಿಲ್ಲದೆ ನಾವು ಅಂಗೀಕರಿಸಿರುವ ಪ್ರಜಾಪ್ರಭುತ್ವವಾದೀ ರಾಜಕೀಯ ವ್ಯವಸ್ಥೆಯು ಸಾಮಾಜಿಕ ಪರಿವರ್ತನೆಯ ಪರಿಣಾಮಕಾರೀ ಅಸ್ತ್ರವಾಗುವುದು ಸಾಧ್ಯವಿಲ್ಲ. ಆದ್ದರಿಂದ ನಮ್ಮ ನಿಜವಾದ ಶತ್ರುವಾದ ಬಡತನದ ವಿರುದ್ಧ ಯುದ್ಧ ಸಾರಿ ಅದರಲ್ಲಿ ಗೆಲ್ಲುವುದು ನಾವೆಲ್ಲ ಜಾತಿ, ಮತ, ಕೋಮು ಭಾವನೆಗಳನ್ನ ಮೀರಿನಿಂತು ನಡೆಸುವ ಐಕ್ಯ ಹೋರಾಟದಿಂದ ಮಾತ್ರ ಸಾಧ್ಯ ಎಂಬ ಸಂದೇಶವನ್ನು ಜನಸಾಮಾನ್ಯರಲ್ಲಿ ಹರಡಬೇಕಾದ ಸಮಯ ಬಂದಿದೆ. ಎಲ್ಲಾ ಪ್ರಜಾಪ್ರಭುತ್ವವಾದಿ ಹಾಗೂ ಧರ್ಮನತೀತ ಶಕ್ತಿಗಳುಮನಗಾಣಬೇಕು.

ಕೋಮುವಾದೀ, ಜಾತಿವಾದಿ ಹಾಗೂ ಪಂಥವಾದೀ ಶಕ್ತಿಗಳನ್ನು ಸೋಲಿಸಿ ನಿರ್ಮೂಲನಗೊಳಿಸಿ ಒಂದು ನ್ಯಾಯಪೂರ್ಣ ಸಮಾಜ ವ್ಯವಸ್ಥೆಗೆ ದಾರಿ ಸುಗಮಗೊಳಿಸುವಲ್ಲಿ ಸರ್ವ ಪ್ರಯತ್ನಗಳನ್ನು ನಡೆಸಲು ಜಾತ್ಯಾತೀತ ಮೌಲ್ಯಗಳಿಗೆ ಬದ್ಧವಾಗಿರುವ ನಾಗರೀಕ ಸಮಿತಿ ಗಂಭೀರ ನಿರ್ಣಯ ಕೈಗೊಳ್ಳುತ್ತದೆ."

—

ಕೇಂದ್ರ-ರಾಜ್ಯ ಸಂಬಂಧಗಳು : ಶ್ರೀನಗರ ಸಮ್ಮೇಳನದ ನಿಲುವು

ಕೇಂದ್ರ-ರಾಜ್ಯ ಸಂಬಂಧಗಳನ್ನು ಕುರಿತು ವಿರೋಧ ಪಕ್ಷಗಳ ಸಮ್ಮೇಳನ ಶ್ರೀನಗರದಲ್ಲಿ ಅಕ್ಟೋಬರ್ ೮ ರಂದು ಹೊರಡಿಸಿದ ಹೇಳಿಕೆಯ ಸಾರಾಂಶವನ್ನು ಈ ಮುಂದೆ ಕೊಡಲಾಗಿದೆ—

ಇತ್ತೀಚೆಗೆ ಶ್ರೀನಗರದಲ್ಲಿ ನಡೆದ ವಿರೋಧ ಪಕ್ಷಗಳ ಸಮ್ಮೇಳನದಿಂದ ಪ್ರಧಾನ ಮಂತ್ರಿಯಾದಿಯಾಗಿ ಆಳುವ ಪಕ್ಷದನಾಯಕರೆಲ್ಲಾ ಭಯಭೀತರಾಗಿರುವಂತೆ ಕಾಣುತ್ತಿದೆ. ಪತ್ರಿಕಾ ಸಮ್ಮೇಳನಗಳಲ್ಲಿ, ಪಕ್ಷದ ಠರಾವುಗಳಲ್ಲಿ ಈ ಬಗ್ಗೆ ಚಿತ್ರ-ವಿಚಿತ್ರ ಪ್ರತಿಕ್ರಿಯೆಗಳು ವ್ಯಕ್ತಗೊಂಡಿವೆ. ವಿರೋಧ ಪಕ್ಷಗಳು ಸರಕಾರದೊಡನೆ ಸಹಕರಿಸುವ ಬದಲು ಶಿಕ್ಕಾಟದ ದಾರಿ ಹಿಡಿಯುತ್ತಿವೆ ಎಂದು ಒಮ್ಮೆ ಟೀಕಿಸಿದರೆ, ಈ ಸಮ್ಮೇಳನ ದೇಶದಲ್ಲಿ ಹಿಂಸಾಚಾರಕ್ಕೆ ಕುಮ್ಮಕ್ಕು ನೀಡಿದೆ ಎಂದು ಇನ್ನೊಮ್ಮೆ ಬೊಬ್ಬಿಡಲಾಗುತ್ತಿದೆ. ಆದರೆ ಶ್ರೀನಗರ ಸಮ್ಮೇಳನದ ಹೇಳಿಕೆಯನ್ನು ಗಮನಿಸಿದರೆ ಇವೆಲ್ಲಾ ಏನೊಂದೂ ಹುರುಳಿಲ್ಲದ ಸುಳ್ಳು ಆರೋಪಗಳೆಂಬುದು ಸ್ಪಷ್ಟವಾಗುತ್ತದೆ. ಶ್ರೀನಗರದಲ್ಲಿ ಸೇರಿದ ವಿರೋಧ ಪಕ್ಷಗಳು, ಇತರ ಕೆಲವು ವಿರೋಧ ಪಕ್ಷಗಳಂತೆ ಆಳುವ ಪಕ್ಷದ ವಿರುದ್ಧ ಮಾತಿನ ಮಂಟಪ ಕಟ್ಟದೆ, ಕೇಂದ್ರ-ರಾಜ್ಯ ಸಂಬಂಧಗಳ ಬಗ್ಗೆ ಮೂರ್ತ ಸಲಹೆಗಳನ್ನು ಮುಂದಿಸಿ ಎಂತಹ ಸಕಾರಾತ್ಮಕ ನಿಲುವು ತಳೆದಿವೆಯೆಂಬುದು ತಿಳಿಯುತ್ತದೆ. ಬಹುಶಃ ಇಂತಹ ಸಕಾರಾತ್ಮಕ ನಿಲುವಿನಿಂದಾಗಿಯೇ ಕೇಂದ್ರದ ಆಳುವ ಪಕ್ಷ ಭಯ ಭೀತಗೊಂಡಿರಬಹುದೇನೋ !

"ರಾಜಕೀಯ, ನ್ಯಾಯ ಶಾಸ್ತ್ರೀಯ, ತಾತ್ವಿಕ, ಧಾರ್ಮಿಕ, ಸಾಹಿತ್ಯಿಕ, ಕಲಾತ್ಮಕ ಮುಂತಾದ ಬೆಳವಣಿಗೆಗಳೆಲ್ಲಾ ಆರ್ಥಿಕ ಬೆಳವಣಿಗೆಯ ತಳಹದಿಯ ಮೇಲೆ ನಿಂತಿವೆ. ಆದರೆ ಇವೆಲ್ಲಾ ಪರಸ್ಪರ ಪ್ರತಿಕ್ರಿಯಿಸುತ್ತವೆ ಮತ್ತು ಆರ್ಥಿಕ ತಳಹದಿಯ ಮೇಲೂ ಪ್ರತಿಕ್ರಿಯೆ ಬೀರುತ್ತವೆ.

ಕೇಂದ್ರ-ರಾಜ್ಯ ಸಂಬಂಧಗಳ ಪುನರ್ವಿಮರ್ಶೆಯ ಅಗತ್ಯ:

ದೇಶ ಇಂದು ಬಿಕ್ಕಟ್ಟಿನಲ್ಲಿ ಸಿಲುಕಿದೆ. ಸ್ವಾತಂತ್ರ್ಯ ಹೋರಾಟದ ಪ್ರಜಾಪ್ರಭುತ್ವ ಮೌಲ್ಯಗಳ ಮೇಲೆ ಪ್ರಹಾರ ನಡೆಯುತ್ತಿದೆ. ಅಧಿಕಾರದ ಕೇಂದ್ರೀಕರಣದಿಂದಾಗಿ ಸರ್ವಾಧಿಕಾರ ಬೆಳೆಯುತ್ತಿದೆ. ಫಲವಾಗಿ ಕೆಲವು ಭಾಗಗಳಲ್ಲಿ ಪರಕೀಯ ಭಾವ ಬೆಳೆಯುತ್ತಿದೆ.

ಈ ಅಪಾಯವನ್ನು ನಿವಾರಿಸಬೇಕು. ದೇಶದ ಸಮಗ್ರತೆ ಮತ್ತು ಸಾರ್ವಭೌಮತ್ವ ನಮ್ಮ ಮಹಾನ್ ದೇಶದ ವಿಭಿನ್ನ ಭಾಷಾ, ಜನಾಂಗೀಯ ಹಾಗೂ ಸಾಂಸ್ಕೃತಿಕ ಘಟಕಗಳಲ್ಲಿ ಸಾಮರಸ್ಯ ಉಂಟು ಮಾಡುವ ಪ್ರಜ್ಞಾ ಪೂರ್ವಕ ಪ್ರಯತ್ನಗಳಿಂದ ಮೂಡಿ ಬರಬೇಕು. ಸ್ವಾತಂತ್ರ್ಯ ಹೋರಾಟ ಸೃಷ್ಟಿಸಿದ ಐಕ್ಯತೆಯ ಸುವರ್ಣ ಎಳೆಯನ್ನು ಈಗ ಮತ್ತಷ್ಟು ಬಲ ಪಡಿಸಬೇಕಾಗಿದೆ.

ನಮ್ಮ ಸಂವಿಧಾನ, ಅದೆಷ್ಟೇ ಮಿಂತಿಗಳಿದ್ದರೂ, ಜನತೆಯ ಪ್ರಜಾ ಸತ್ತಾತ್ಮಕ ಮುನ್ನಡೆಯ, ಒಂದು ಮಹತ್ವಪೂರ್ಣ ದಸ್ತಾವೇಜು. ಜನತೆಯ ಅನುಭವ ಹಾಗೂ ಬೇಡಿಕೆಗಳಿಗನುಗುಣವಾಗಿ ಅದು ಬದಲಾಗಬೇಕು. ಸರ್ಕಾರಿಯಾ ಆಯೋಗದ ರಚನೆ ಸ್ವಾಗತಾರ್ಹವಾದರೂ ಅದು ಸದ್ಯದ ಸನ್ನಿವೇಶದ ಅವಶ್ಯಕತೆಗೆ ಸರಿಹೊಂದುವಷ್ಟರ ಮಟ್ಟದಲ್ಲಿಲ್ಲ. ಈ ಹಿನ್ನೆಲೆಯಲ್ಲಿ ಕೇಂದ್ರ-ರಾಜ್ಯ ಸಂಬಂಧಗಳನ್ನು ಅದರ ರಾಜಕೀಯ, ಆರ್ಥಿಕ, ಕಾನೂನಾತ್ಮಕ ಹಾಗೂ ಸಂವೈಧಾನಿಕ ಆಯಾಮಗಳಲ್ಲಿ ಪರಿಶೀಲಿಸಲು ವಿವಿಧ ವಿರೋಧ ಪಕ್ಷಗಳ ಈ ಸಭೆ ನಡೆಯಿತು. ಈ ಸಂದರ್ಭದಲ್ಲಿ ಬಾಹ್ಯ ಬೆದರಿಕೆ ಹಾಗೂ ಹಲವೆಡೆ ಆಂತರಿಕ ಕೋಲಾಹಲದ ಅರಿವು ನಮಗಿದೆ. ಆದರೂ, ನಮಗೆ ಒಂದು ದೇಶವಾಗಿ ಇವನ್ನೆಲ್ಲಾ ಎದುರಿಸುವ ಆಂತರಿಕ ಶಕ್ತಿ ಮೂಲ ಇದೆ ಎಂಬುದರಲ್ಲಿ ನಮಗೆ ಸಂಶಯವಿಲ್ಲ. ಈ ಸಂದರ್ಭದಲ್ಲಿ ರಾಷ್ಟ್ರೀಯ ಐಕ್ಯತೆಯ ಶಕ್ತಿಗಳನ್ನು ಬಲ ಪಡಿಸಲು ಕೇಂದ್ರ-ರಾಜ್ಯಗಳ ಸಂಬಂಧಗಳ ಬಗ್ಗೆ ಪರಿಶೀಲಿಸುವುದು ಇನ್ನಷ್ಟು ಸಮಯೋಚಿತವಾಗಿದೆ.

ರಾಜಕೀಯ ಹಾಗೂ ಆಡಳಿತಾತ್ಮಕ ಆಯಾಮ :

ನಮ್ಮ ಸಂವಿಧಾನ ಒಕ್ಕೂಟ ಸ್ವರೂಪದ್ದಾಗಿರಬೇಕೆಂಬ ಆಶಯವಿದ್ದರೂ ಕೂಡಾ ಅದರ ಏಕ ಘಟಕ ಲಕ್ಷಣಗಳೇ ಹೆಚ್ಚೆಚ್ಚು ಪ್ರಬಲಗೊಳ್ಳುತ್ತಾ ಬಂದಿದೆ. ಹಲವು ವರ್ಷ ಕೇಂದ್ರ ಹಾಗೂ ರಾಜ್ಯಗಳಲ್ಲಿ ಏಕ ಪಕ್ಷದ ಆಡಳಿತದಿಂದಾಗಿ ರಾಜ್ಯಗಳ ಅಧಿಕಾರಗಳು ಬಹಳಷ್ಟು ಸವೆದಿದೆ. ಇದರಿಂದಾಗಿ ಕೇಂದ್ರ ಹಾಗೂ ರಾಜ್ಯಗಳ ನಡುವೆ ವಿವಾದಗಳು ಎದ್ದಿವೆ. ಆದ್ದರಿಂದ ನಮ್ಮ ದೇಶದ ಬಹು-ಧರ್ಮ, ಬಹು-ಭಾಷಾ ಹಾಗೂ ಬಹು-ಸಾಂಸ್ಕೃತಿಕ ಸ್ವರೂಪವನ್ನು ಉಳಿಸಬೇಕಾದರೆ ಕೇಂದ್ರ ಮತ್ತು ರಾಜ್ಯಗಳ ನಡುವಿನ ಅಧಿಕಾರಗಳಲ್ಲಿ ಸಮತೋಲ ತಂದು ರಾಜ್ಯಗಳ ಸ್ವಾಯತತ್ತೆಯನ್ನು ಪುನರ್ ಸ್ಥಾಪಿಸಬೇಕಾಗಿದೆ.

ಇದನ್ನು ಸಾಧಿಸಬೇಕಾದರೆ ಕೇಂದ್ರ ರಾಜ್ಯಗಳ ಬಗ್ಗೆ ಸ್ವೇಚ್ಛಾಧಿಕಾರ ಉಪಯೋಗಿಸುವುದನ್ನು ತಡೆಯಬೇಕು. ರಾಜ್ಯಪಾಲರ ಹುದ್ದೆಯನ್ನು ಇದಕ್ಕಾಗಿ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ರಾಜ್ಯಪಾಲರ ನೇಮಕ, ಕೇಂದ್ರದ ನಿರ್ದೇಶನಕ್ಕೊಳಪಡದೆ ಕಾರ್ಯ ನಿರ್ವಹಿಸುವ ರಾಜ್ಯಪಾಲರ ಅಧಿಕಾರ ಇತ್ಯಾದಿ ವಿಷಯಗಳಲ್ಲಿ ಸಂವಿಧಾನದ ಉಲ್ಲಂಘನೆಯಾಗುತ್ತಿದೆ. ರಾಜ್ಯಪಾಲರ ಸ್ಥಾನ ರಾಷ್ಟ್ರಪತಿಯ ಸ್ಥಾನಕ್ಕಿಂತ ಭಿನ್ನವಾಗಿರಬಾರದು ಎಂಬುದು ನಮ್ಮ ಭಾವನೆ. ರಾಜ್ಯ ಸರಕಾರ ನೀಡುವ ಪಟ್ಟಿಯ ಆಧಾರದ ಮೇಲೆ ರಾಷ್ಟ್ರಪತಿಗಳು ರಾಜ್ಯಪಾಲರನ್ನು ನೇಮಿಸಬೇಕು.

ಸಂವಿಧಾನದ ಈ ಕೆಳಗಿನ ಕಲಮುಗಳನ್ನು ತಿದ್ದುಪಡಿಗೊಳಿಸಬೇಕು ಅಥವಾ ರದ್ದು ಮಾಡಬೇಕು.

ರಾಜ್ಯ ಪಟ್ಟಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಕೇಂದ್ರ ಅಥವಾ ರಾಜ್ಯಪಾಲರ ಹಸ್ತಕ್ಷೇಪಕ್ಕೆಡೆಗೊಡುವ ಕಲಮು 200 ಹಾಗೂ 201; ಎಲ್ಲಾ ವಿಷಯಗಳ ಬಗ್ಗೆ ಕೇಂದ್ರಕ್ಕೆ ಬಾಕಿ ಅಧಿಕಾರಗಳನ್ನು ನೀಡುವ ಕಲಮು 248 ಹಾಗೂ ಕೇಂದ್ರ ಪಟ್ಟಿಯ 97ನೇ ವಿಷಯ; ರಾಜ್ಯ ಪಟ್ಟಿಯ ವಿಷಯದಲ್ಲಿ ಶಾಸನ ಮಾಡಲು ಕೇಂದ್ರಕ್ಕೆ ಅಧಿಕಾರ ಕೊಡುವ 249ನೇ ಕಲಮು ; ಎರಡು ಅಥವಾ ಹೆಚ್ಚು ರಾಜ್ಯಗಳ ಕೋರಿಕೆಯ ಮೇರೆಗೆ ರಾಜ್ಯ ಪಟ್ಟಿಯ ವಿಷಯಗಳ ಮೇಲೆ ಶಾಸನ ರಚಿಸಲು ಕೇಂದ್ರಕ್ಕೆ ಅವಕಾಶ ನೀಡುವ 252ನೇ ಕಲಮು ; ರಾಜ್ಯ ಸರಕಾರವನ್ನು ಅಥವಾ ವಿಧಾನ ಸಭೆಯನ್ನು ವಿಸರ್ಜಿಸಲು ರಾಷ್ಟ್ರಪತಿಗಳಿಗೆ ಅಧಿಕಾರ ನೀಡುವ 356 ಹಾಗೂ 357ನೇ ಕಲಮು ; ರಾಜ್ಯದ ಆಡಳಿತದಲ್ಲಿ ರಾಷ್ಟ್ರಪತಿಯ ಹಸ್ತಕ್ಷೇಪಕ್ಕೆ ಅವಕಾಶ ನೀಡುವ 360ನೇ ಕಲಮು ; ಕೇಂದ್ರದ ನಿರ್ದೇಶನ ಪಾಲಿಸದಿದ್ದರೆ ರಾಜ್ಯ ಸರಕಾರವನ್ನು ಕಿತ್ತುಹಾಕಲು ರಾಷ್ಟ್ರಪತಿಗಳಿಗೆ ಅಧಿಕಾರ ನೀಡುವ 365ನೇ ಕಲಮು.

ಅಲ್ಲದೆ ಸಂವಿಧಾನದ 263 ನೇ ಕಲಮದ ಪ್ರಕಾರ ಅಂತರ-ರಾಜ್ಯ ಪರಿಷತ್ತನ್ನು ರಾಷ್ಟ್ರಪತಿಗಳು ರಚಿಸಬಹುದು. ಪ್ರಧಾನಮಂತ್ರಿ ಹಾಗೂ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳಿರುವ ಇಂತಹ ಪರಿಷತ್ತನ್ನು ರಚಿಸುವಂತೆ ರಾಷ್ಟ್ರಪತಿಗಳನ್ನು ಬದ್ಧರಾಗಿಸುವಂತೆ ಇದನ್ನು ತಿದ್ದುಪಡಿ ಮಾಡಬೇಕು. 370ನೇ ಕಲಮಿನ ಪ್ರಕಾರ ಜಮ್ಮು-ಕಾಶ್ಮೀರದ ವಿಶೇಷ ಸಂವೈಧಾನಿಕ ಸ್ಥಾನಮಾನವನ್ನು ಅಕ್ಷರಶಃ ಜಾರಿಗೊಳಿಸಬೇಕು. ಇವಲ್ಲದೆ ಮಂತ್ರಿ ಪರಿಷತ್ತಿಗೆ ಸಂಬಂಧಪಟ್ಟಂತೆ ರಾಜ್ಯಪಾಲರ ಅಧಿಕಾರ ಹಾಗೂ ಕೆಲಸಗಳನ್ನು, ಅದೇ ರೀತಿ ಕೇಂದ್ರ ಸರಕಾರದ ಅಧಿಕಾರ ಹಾಗೂ ಕಾರ್ಯ ನಿರ್ವಹಣೆಯನ್ನು ಕುರಿತಾದ ಸಂವಿಧಾನದ ಕಲಮುಗಳನ್ನು ಪುನರ್ವಿಮರ್ಶಿಸಬೇಕು. ಏಳನೇ ಷೆಡ್ಯೂಲಿನಲ್ಲಿರುವ ಮೂರು ಪಟ್ಟಿಗಳನ್ನು ಕೂಡಾ ಕಳೆದ ಮೂರು ದಶಕಗಳ ಅನುಭವದ ಆಧಾರದ ಮೇಲೆ ಪುನರ್ವಿಮರ್ಶಿಸಬಾರದೇಕೆ ಎಂಬುದನ್ನೂ ಪರಿಶೀಲಿಸಬೇಕು.

ಆಡಳಿತ :

ಅಖಿಲ ಭಾರತ ಸೇವೆಗಳ ಅಧಿಕಾರಿಗಳು ರಾಜ್ಯಗಳಲ್ಲಿ ಕೆಲಸ ಮಾಡುವಾಗ ಅವರು ರಾಜ್ಯ ಸರಕಾರದ ಶಿಸ್ತಿಗೆ ಒಳಪಟ್ಟಿರಬೇಕು. ಅವರ ಮೇಲೆ ಶಿಸ್ತಿನ ಕ್ರಮ ಕೈಗೊಂಡಾಗ ಅಪೀಲು ಹೋಗಬೇಕಾಗಿ ಬಂದರೆ ಆಡಳಿತ ಟ್ರಿಬ್ಯೂನಲ್‌ಗೆ ಹೋಗಬೇಕು. ಈ ಟ್ರಿಬ್ಯೂನಲ್‌ಗಳು ಕೇಂದ್ರ ಹಾಗೂ ರಾಜ್ಯ ಸರಕಾರಗಳಿಂದ ಸ್ವತಂತ್ರವಾಗಿರಬೇಕು. ನ್ಯಾಯಾಂಗ ಎಲ್ಲಾ ಹಂತಗಳಲ್ಲಿ ರಾಜಕೀಯ ಹಸ್ತಕ್ಷೇಪದಿಂದ ಮುಕ್ತವಾಗಿರಬೇಕು. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕ, ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರ ವರ್ಗಾವಣೆ ಇತ್ಯಾದಿ ವಿಷಯಗಳ ಬಗ್ಗೆ ಸಲಹೆ ನೀಡಲು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನ್ಯಾಯಾಂಗ ಪರಿಷತ್ತನ್ನು ನೇಮಿಸಿ ಈ ಪರಿಷತ್ತಿನ ಸಲಹೆಗೆ ರಾಷ್ಟ್ರಪತಿ ಬದ್ಧರಾಗಿರಬೇಕು.

ಚುನಾವಣಾ ಆಯೋಗ ನಂಬಿಕೆಗೆ ಅರ್ಹವಾಗಬೇಕಾದರೆ ಮೇಲೆ ಹೇಳಿದ ನ್ಯಾಯಾಂಗ ಪರಿಷತ್ತಿನ ಸಲಹೆಯ ಮೇರೆಗೆ ರಾಷ್ಟ್ರಪತಿ ನೇಮಿಸುವ ಮೂವರು ಸದಸ್ಯರನ್ನು ಅದು ಒಳಗೊಂಡಿರಬೇಕು.

ರಾಜ್ಯದಲ್ಲಿರುವ ಕಾನೂನು ವ್ಯವಸ್ಥೆಯ ವಿಷಯದಲ್ಲಿ ರಾಜ್ಯ ಸರಕಾರದ ಅಧಿಕಾರವನ್ನು ಸಂಪೂರ್ಣವಾಗಿ ಮಾನ್ಯ ಮಾಡಬೇಕು. ಕೇಂದ್ರದ ಪೋಲೀಸ್ ಪಡೆಗಳನ್ನು ಕಳುಹಿಸಬೇಕಾದ ಅಗತ್ಯ ಬಂದಾಗ ಅಥವಾ ಗಲಭೆ ಪೀಡಿತ ಪ್ರದೇಶ ಕಾನೂನನ್ನು ಯಾವುದೇ ರಾಜ್ಯಕ್ಕೆ ವಿಸ್ತರಿಸಬೇಕಾಗಿ ಬಂದಾಗಲೂ ರಾಜ್ಯ ಸರಕಾರದ ಸಮ್ಮತಿಯನ್ನು ಮೊದಲೇ ಪಡೆಯಬೇಕು.

ಕೇಂದ್ರದ ಆಳುವ ಪಕ್ಷ ಆಕಾಶವಾಣಿ ಹಾಗೂ ದೂರದರ್ಶನವನ್ನು ಹೆಚ್ಚೆಚ್ಚಾಗಿ ದುರುಪಯೋಗ ಪಡಿಸಿಕೊಳ್ಳುತ್ತಿದೆಯೆಂಬುದು ಸಮಸ್ತ ದೇಶಕ್ಕೇ ತಿಳಿದಿದೆ ಸರಕಾರದ ಧೋರಣೆಗಳ ಬಗ್ಗೆ ವಿವಿಧ ಅಭಿಪ್ರಾಯ ಜನತೆಗೆ ತಿಳಿಯುವಂತಾಗ ಬೇಕಾದರೆ ಒಂದು ಶಾಸನಬದ್ಧ ಕೇಂದ್ರೀಯ ಸಂಪರ್ಕ ಪರಿಷತ್ತನ್ನು ಸ್ಥಾಪಿಸಬೇಕು. ಕೇಂದ್ರ ಹಾಗೂ ರಾಜ್ಯಗಳ ಮಂತ್ರಿಗಳು, ರಾಜಕೀಯ ಪಕ್ಷಗಳು ಹಾಗೂ ಪರಿಣತರು ಅದರ ಸದಸ್ಯರಾಗಿದ್ದು ಆಕಾಶವಾಣಿ, ದೂರದರ್ಶನ ಇತ್ಯಾದಿಗಳ ಮೇಲ್ವಿಚಾರಣೆ ನೋಡಿಕೊಳ್ಳುವಂತಾಗಬೇಕು. ರಾಜ್ಯ ಮಟ್ಟದಲ್ಲೂ ಇಂತ ಪರಿಷತ್ತುಗಳು ಸ್ಥಾಪಿತಗೊಳ್ಳಬೇಕು.

ಆರ್ಥಿಕ ಹಾಗೂ ಹಣಕಾಸಿನ ಆಯಾಮ :

ಆರ್ಥಿಕ ಅಸಮತೋಲನ ಹಾಗೂ ಹಲವು ರಾಜ್ಯಗಳ ಆರ್ಥಿಕ ಹಿಂದುಳಿದಿರುವಿಕೆಗೆ ಆರ್ಥಿಕ ಅಧಿಕಾರಗಳ ಹಾಗೂ ಸಂಪನ್ಮೂಲಗಳ ಅತಿಕೇಂದ್ರೀಕರಣವೇ ಕಾರಣ. ಸಾರ್ವಜನಿಕ ವಲಯದ ಸಂಪನ್ಮೂಲಗಳ 70 ಶೇಕಡದಷ್ಟನ್ನು ಕೇಂದ್ರ ಸರಕಾರ ಪಡೆಯುತ್ತಿದ್ದು, ಇದನ್ನು ಹಂಚುವಲ್ಲಿ ಪಕ್ಷಪಾತ ನಡೆಯುತ್ತಿದೆ. ತೆರಿಗೆಗಳಲ್ಲೂ ಹೆಚ್ಚು ಲಾಭಕರವಾದುದನ್ನು ಕೇಂದ್ರವೇ ತನ್ನ ಕೈಯಲ್ಲೇ ಇಟ್ಟುಕೊಂಡು ರಾಜ್ಯಗಳಿಗೆ ಪಾಲು ಕೊಡಲು ನಿರಾಕರಿಸುತ್ತಿದೆ. ಸಂವಿಧಾನದ 268 ಹಾಗೂ 269ನೇ ಕಲಮುಗಳು ಕೇಂದ್ರದ ವ್ಯಾಪ್ತಿಗೆ ಬರುವ ಸಂಪನ್ಮೂಲಗಳನ್ನು ರಾಜ್ಯಗಳ ಉಪಯೋಗಕ್ಕಾಗಿ ಮೀಸಲಿಡುವ ಅವಕಾಶವಿತ್ತಿದೆ. ಈ ಕಲಮುಗಳ ಉಪಯೋಗ ಮಾಡಲಾಗುತ್ತಿಲ್ಲ. ಅಷ್ಟೇ ಅಲ್ಲ ರಾಜ್ಯಗಳ ಪಾಲನ್ನು ಕೂಡಾ ಕೇಂದ್ರ ಕಸಿದು ಕೊಳ್ಳುತ್ತಿದೆ. ಹಲವು ವಿಧಾನಗಳಿಂದ ದೇಶದ ಸಂಪನ್ಮೂಲಗಳಲ್ಲಿ ರಾಜ್ಯಗಳ ನ್ಯಾಯಬದ್ಧ ಪಾಲನ್ನು ವಂಚಿಸಲಾಗುತ್ತಿದೆ. 1950 ರಲ್ಲಿ ಮಾರುಕಟ್ಟೆಯ ಸಾಲದ ಮೂರರಲ್ಲಿ ಎರಡು ಪಾಲು ರಾಜ್ಯಗಳಿಗೆ ಮೀಸಲಿಡುತ್ತಿದ್ದರೆ, ಈಗ ಕೇಂದ್ರ 90 ಶೇಕಡದಷ್ಟು ತಾನೇ ಇಟ್ಟು ಕೊಳ್ಳುತ್ತಿದೆ.

ಆದ್ದರಿಂದ ಸಾಂಸ್ಥಿಕ ತೆರಿಗೆ, ಅಧಿತೆರಿಗೆಯನ್ನು ರಾಜ್ಯಗಳೊಡನೆ ಹಂಚಿಕೊಳ್ಳುವಂತೆ, ಸಂವಿಧಾನದ 268 ಹಾಗೂ 269ನೇ ಕಲಮುಗಳ ಉಪಯೋಗ ಪಡೆಯಲು ಸಾಧ್ಯವಾಗುವಂತೆ, ಕೇಂದ್ರವು ವಿವಿಧ ವಿಧಾನಗಳಲ್ಲಿ ಹೆಚ್ಚು ಸಂಪನ್ಮೂಲ ಪಡೆಯುವಲ್ಲಿ ರಾಜ್ಯಗಳಿಗೂ ಅವುಗಳ ಪಾಲು ಸಿಗುವಂತೆ ಕೇಂದ್ರ ಹಾಗೂ ರಾಜ್ಯಗಳ ನಡುವಿನ ಹಣಕಾಸಿನ ವ್ಯವಸ್ಥೆಯಲ್ಲಿ ತಕ್ಷಣ ಪರಿವರ್ತನೆ ಮಾಡಬೇಕು. ರಾಜ್ಯಗಳೊಂದಿಗೆ ಸಮಾಲೋಚಿಸಿ ಖನಿಜ ಸಂಪನ್ಮೂಲಗಳ ಮೇಲೆ ಮೌಲ್ಯಕ್ಕನುಗುಣವಾಗಿ ಗೌರವಧನವನ್ನು ಸಂಬಂಧಪಟ್ಟ ರಾಜ್ಯಗಳಿಗೆ ನೀಡಬೇಕು ಹಣದ ಸೃಷ್ಟಿ ಹಾಗೂ ಓವರ್ ಡ್ರಾಫ್ಟ್ ಬಗ್ಗೆ ಕೇಂದ್ರ ಸರಕಾರದ ಧೋರಣೆಗಳ ಬಗ್ಗೆ ಪುನರ್ವಿಮರ್ಶೆ ನಡೆಯಬೇಕು. ರಿಸರ್ವ್ ಬ್ಯಾಂಕಿನಲ್ಲಿ ರಾಜ್ಯಗಳಿಗೆ ಪ್ರಾತಿನಿಧ್ಯ ಹಾಗೂ ರಾಜ್ಯಗಳಿಗೆ ವಾಣಿಜ್ಯ ಬ್ಯಾಂಕು ಸ್ಥಾಪಿಸಲು ಅನುಮತಿ ನೀಡಬೇಕು. ಕೇಂದ್ರ ಹಾಗೂ ರಾಜ್ಯಗಳ ನಡುವೆ ಹಣಕಾಸಿನ ಪ್ರಶ್ನೆಗಳ ಬಗ್ಗೆ ಪರಾಮರ್ಶೆ ನಡೆಸಲು ಒಂದು ಸಾಂಸ್ಥಿಕ ವೇದಿಕೆ ಸ್ಥಾಪಿಸಬೇಕು.

ಯೋಜನೆ :

ದೇಶ ಎದುರಿಸುತ್ತಿರುವ ಕ್ಲಿಷ್ಟ ಹಾಗೂ ವಿಭಿನ್ನರೀತಿಯ ಸಮಸ್ಯೆಗಳನ್ನು ಪರಿಹರಿಸುವ ಉದ್ದೇಶದಿಂದ ಸ್ಥಾಪನೆಗೊಂಡ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಹಾಗೂ ಯೋಜನಾ ಆಯೋಗ ತಮ್ಮ ಮೂಲೋದ್ದೇಶವನ್ನೇ ಹಾಳುಗೆಡಿಸಿವೆ. ಇವುಗಳನ್ನು ಪುನಸಂಘಟಿಸಬೇಕು. ರಾಜ್ಯಗಳಿಗೆ ಈ ಸಂಸ್ಥೆಗಳಲ್ಲಿ ಯೋಗ್ಯ ಪ್ರಾತಿನಿಧ್ಯ ದೊರೆಯುವಂತೆ

[6ನೇ ಪುಟ ನೋಡಿ]

ಆರ್ಥಿಕ ಸಮೀಕ್ಷೆ:

ನಿರುದ್ಯೋಗಕ್ಕೆ ಇಂದಿರಾ ಪರಿಹಾರ : ಸಾಗರದಲ್ಲಿ ಹನಿ

—ಆರ್. ಚಂದ್ರ

ಸ್ವತಂತ್ರ ಭಾರತದಲ್ಲಿ ಕಳೆದ 36 ವರ್ಷಗಳ ಕಾಂಗ್ರೆಸ್-ಜನತಾ-ಕಾಂಗ್ರೆಸ್ ಆಳ್ವಿಕೆಯಲ್ಲಿ ನಿರಂತರವಾಗಿ ಏರುತ್ತಿರುವುದು ಜನರ ಜೀವನಾವಶ್ಯಕ ವಸ್ತುಗಳ ಬೆಲೆಗಳು ಹಾಗೂ ಅವರ ಬಡತನ ಮತ್ತು ನಿರುದ್ಯೋಗ ಅಷ್ಟೆ. ಬಂಡವಾಳಶಾಹಿ-ಭೂಮಾಲಕ ವ್ಯವಸ್ಥೆ ಉದ್ಯೋಗಸ್ಥ ವ್ಯಕ್ತಿ ಹಾಗೂ ಕುಟುಂಬದ ಮೇಲೆ ಹೊರಿಸಿರುವ ಹೊಣೆಗಾರಿಕೆಗಳು ಅಪಾರ. ಇಂತಹ ಸಮಾಜದಲ್ಲಿ ಉದ್ಯೋಗಾವಕಾಶ ಪ್ರತಿಯೊಬ್ಬನಿಗೂ ಎಷ್ಟು ಪ್ರಾಮುಖ್ಯವಾದುದು, ನಿರುದ್ಯೋಗ ಸಮಸ್ಯೆ ಎಷ್ಟು ಗಂಭೀರವಾದುದು ಎಂಬುದನ್ನು ಗಮನಿಸಬೇಕು.

ಇತ್ತೀಚೆಗೆ ಸಂಸತ್ತಿನಲ್ಲಿ ನಡೆದ ಪ್ರಶ್ನೋತ್ತರಗಳ ಮೂಲಕ ನಿರುದ್ಯೋಗ ಸಮಸ್ಯೆ ಭೂತಕಾರವಾಗಿ ಬೆಳೆದಿರುವುದನ್ನು ತಿಳಿಯಬಹುದು. ಅದಕ್ಕೆ ಸಂಬಂಧಪಟ್ಟ ಅಂಕೆಸಂಖ್ಯೆಗಳನ್ನು ಈ ಪುಟದಲ್ಲಿರುವ ಕೋಷ್ಟಕಗಳಲ್ಲಿ ಕೊಡಲಾಗಿದೆ. ಯಾಂತ್ರೀಕರಣ, ಗಣಕೀಕರಣ, ಹಣದುಬ್ಬರ, ಆರ್ಥಿಕ ಹಿಂಜರಿತ ಇತ್ಯಾದಿಗಳ ಪರಿಣಾಮವಾಗಿ ಕಾರ್ಖಾನೆಗಳಲ್ಲಿ ರಿಟ್ರೆಂಚ್‌ಮೆಂಟ್ ಲೇಆಫ್, ಕ್ಲೋಶರ್, ಲಾಕೌಟ್ ಮುಂತಾದವುಗಳಿಂದಾಗಿ, ಜತೆಗೆ ಅಂತರಾಷ್ಟ್ರೀಯ ಹಣಕಾಸು ನಿಧಿಯಿಂದ ಪಡೆದ ಬೃಹತ್ ಸಾಲದ ಕಠಿಣ ಶರತ್ತುಗಳಿಂದಾಗಿ ನಿರುದ್ಯೋಗ ಸಮಸ್ಯೆ ಉಲ್ಬಣಗೊಳ್ಳುತ್ತಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ತಾಳ್ಮೆ ಕಳೆದುಕೊಳ್ಳುತ್ತಿರುವ ಜನ ಸಂಘಟಿತರಾಗಿ ಸರಕಾರದ ಜನ-ವಿರೋಧೀ, ಕಾರ್ಮಿಕ-ವಿರೋಧೀ ಧೋರಣೆಗಳ ವಿರುದ್ಧ ಹೋರಾಡುತ್ತಿದ್ದಾರೆ.

ಸದ್ಯದ ಗಂಭೀರ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡೇ ಪ್ರಧಾನಿ ಇಂದಿರಾಗಾಂಧಿ ಸ್ವಾತಂತ್ರ್ಯೋತ್ಸವದ ದಿನ ದೆಹಲಿಯ ಕೆಂಪು ಕೋಟೆಯಲ್ಲಿ ತನ್ನ ಭಾಷಣದಲ್ಲಿ ನಿರುದ್ಯೋಗ ಹೋಗಲಾಡಿಸಲು ಎರಡು ದೇಶವ್ಯಾಪೀ ಕಾರ್ಯಕ್ರಮಗಳನ್ನು ಜಾರಿಗೆ ತರುವುದಾಗಿ ಘೋಷಿಸಿದ್ದು. ಇಂದಿರಾ ಕಾಂಗ್ರೆಸ್ ದೆಹಲಿಯಲ್ಲಿ ಪುನಃ ಅಧಿಕಾರಕ್ಕೆ ಬಂದು ಮೂರುವರೆ ವರ್ಷಗಳಾದ ಮೇಲೆ ಈಗ ಈ ಹೊಸ ಕಾರ್ಯಕ್ರಮಗಳನ್ನು ಘೋಷಿಸಿದ ಔಚಿತ್ಯವೇನು ? ಹೊಸಕಾರ್ಯಕ್ರಮಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅವುಗಳ ನಿಷ್ಪ್ರಯೋಜಕತೆಯು ಅರಿವಾಗುವುದು.

ಗ್ರಾಮೀಣ ಉದ್ಯೋಗ

ಪ್ರಧಾನಿಯವರು ಘೋಷಿಸಿದ ಮೊದಲಿನ ಕಾರ್ಯಕ್ರಮ ಪ್ರತಿಯೊಂದು ಗ್ರಾಮೀಣ ಕುಟುಂಬದಲ್ಲಿ ಒಬ್ಬನಿಗಾದರೂ ಉದ್ಯೋಗ ದೊರಕಿಸುವುದು ಇದರ ಪ್ರಕಾರ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ (NREP) ದಡಿಯಲ್ಲಿ 1983–84 ರಲ್ಲಿ ಇನ್ನೂ 6 ಕೋಟಿಯಷ್ಟು ಹೆಚ್ಚು ಅಂದರೆ 36 ಕೋಟಿ ಕೆಲಸ ದಿನಗಳಷ್ಟು ಉದ್ಯೋಗಾವಕಾಶಗಳನ್ನು ಒದಗಿಸಲಾಗುವುದು; 1984-85 ರಲ್ಲಿ ಈ ಸಂಖ್ಯೆ 30 ಕೋಟಿ ಕೆಲಸದ ದಿನಗಳು. 1977–78 ರಲ್ಲಿ ಜನತಾ ಸರಕಾರದ ಕಾಲದಲ್ಲಿ ಕೂಲಿಗಾಗಿ ಕಾಳು ಎಂಬ ಹೆಸರಿನಲ್ಲಿ ಈ ಯೋಜನೆ ಪ್ರಾರಂಭವಾದದ್ದು. ಕೇಂದ್ರ ಸರಕಾರ 1978–79 ರಲ್ಲಿ 10 ಲಕ್ಷ ಟನ್ ಧಾನ್ಯ ಬಿಡುಗಡೆ ಮಾಡಿತ್ತು. ಒಬ್ಬ ಕೆಲಸಗಾರನಿಗೆ ದಿನಕ್ಕೆ $2\frac{1}{2}$ ಕೆ. ಜಿ. ಧಾನ್ಯ ಕೂಲಿಯಂತೆ ಆ ವರ್ಷದಲ್ಲೇ 40 ಕೋಟಿ ಕೆಲಸದ ದಿನಗಳ ಉದ್ಯೋಗಾವಕಾಶಗಳನ್ನು ನಿರ್ಮಿಸಲಾಗಿತ್ತು. ಈ ವರ್ಷದ ಉದ್ದೇಶಿತ ಗುರಿಯಾದ 36 ಕೋಟಿ ಕೆಲಸದ ದಿನಗಳು ಬಹಳ ಕಡಿಮೆ ಎಂದು ಇದರಿಂದ ತಿಳಿಯಬಹುದು. ಅಲ್ಲದೆ ಈ ಹೊಸ ಕಾರ್ಯಕ್ರಮ ಜನತಾ ಸರಕಾರದ "ಕೂಲಿಗಾಗಿ ಕಾಳು'' ಯೋಜನೆಯಷ್ಟು ಯಶಸ್ವಿಯಾಗಲಾರದು. ಕಾರಣ, ಕೂಲಿಯನ್ನು ಆಹಾರ ಧಾನ್ಯಗಳ ರೂಪದಲ್ಲಿ ಕೊಡದೆ ಹಣದ ರೂಪದಲ್ಲಿ ಕೊಡುವುದರಿಂದ ಹಣದುಬ್ಬರದ ಪರಿಣಾಮದಿಂದ, ಹಲವು ಕಾರಣಗಳಿಂದ ಈ ಮೊತ್ತಕ್ಕೆ ಕತ್ತರಿ ಪ್ರಯೋಗವಾಗುವ ಸಂಭವವಿರುವುದರಿಂದ, ಭ್ರಷ್ಟಾಚಾರ ಹಾಗೂ ಮಧ್ಯಮವರ್ಗಗಳ ಕೈವಾಡದಿಂದ ಈ ಯೋಜನೆಯ ಪೂರ್ಣ ಪ್ರಯೋಜನ ಗ್ರಾಮೀಣ ಜನರಿಗೆ ಮುಟ್ಟದಿರಬಹುದು.

ಕೋಷ್ಟಕ-2 ರಲ್ಲಿ ತೋರಿಸಿದಂತೆ ಗ್ರಾಮೀಣ ನಿರುದ್ಯೋಗಿಗಳ ಸಂಖ್ಯೆ 1978 ರಲ್ಲಿ 1 ಕೋಟಿ 65 ಲಕ್ಷ ಇದ್ದದ್ದು 1985 ರಲ್ಲಿ 3 ಕೋಟಿಗೇರುವ ನಿರೀಕ್ಷೆಯಿದೆ. 1984-85 ರಲ್ಲಿ NREP ಹೊಸ ಕಾರ್ಯಕ್ರಮದ ಪ್ರಕಾರವೂ 500 ಕೋಟಿ ರೂ. ವೆಚ್ಚದಿಂದ ಹೆಚ್ಚೆಂದರೆ 30 ಕೋಟಿ ಕೆಲಸದ ದಿನಗಳ ಉದ್ಯೋಗಾವಕಾಶದಿಂದ 10 ಲಕ್ಷ ಗ್ರಾಮೀಣ ಜನರಿಗೆ ಉದ್ಯೋಗ ದೊರೆಯುವ ಗುರಿ ಸ್ಥಾಪಿಸಬಹುದು.

ಕೋಷ್ಟಕ—೧

ನಗರ ಪ್ರದೇಶಗಳ ನಿರುದ್ಯೋಗಸ್ಥರ ಸಂಖ್ಯೆ (ಲಕ್ಷಗಳಲ್ಲಿ)

(ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ದಾಖಲಾತಿ ಪಡೆದವರು)

ವರ್ಷ	ವಿದ್ಯಾವಂತ ನಿರುದ್ಯೋಗಿಗಳು				ಒಟ್ಟು ವಿದ್ಯಾವಂತ ನಿರುದ್ಯೋಗಿಗಳು	ನಗರಗಳಲ್ಲಿ ಒಟ್ಟು ನಿರುದ್ಯೋಗಿಗಳು
	ಎಸ್.ಎಸ್.ಎಲ್.ಸಿ.	ಪಿ.ಯು.ಸಿ.	ಪದವೀಧರರು	ಸ್ನಾತಕೋತ್ತರ		
1978	35	16	12	1.1	64	127
1979	40	19	13	1.2	73	143
1980	46	21	14	1.9	82	162
1981	50	23	15	1.4	90	178
1982	57	24	16	1.7	98	197
1983	(ನಿರೀಕ್ಷಿತ ಸಂಖ್ಯೆ)				100	200
1985	(ನಿರೀಕ್ಷಿತ ಸಂಖ್ಯೆ)				125	250

ಕೋಷ್ಟಕ—೨

ಗ್ರಾಮೀಣ ನಿರುದ್ಯೋಗಸ್ಥರು

ವರ್ಷ	ಸಂಖ್ಯೆ	ಅಂಕೆ-ಸಂಖ್ಯೆಗಳ ಮೂಲ
1978	165 ಲಕ್ಷ	(ಜನತಾ ಸರಕಾರದ 6ನೇ ಯೋಜನೆಯ ಕರಡು ಪ್ರತಿಯ ನಿರೀಕ್ಷೆ)
1981	250 ಲಕ್ಷ	(1981ರ ಜನಗಣತಿಯ ನಿರೀಕ್ಷೆ)
1955	300 ಲಕ್ಷ	(ಹೊಸ 6ನೇ ಯೋಜನೆಯ ನಿರೀಕ್ಷೆ)

ಆಗಲೂ ನಿರುದ್ಯೋಗಸ್ಥರ ಒಟ್ಟು ಸಂಖ್ಯೆ 3 ಕೋಟಿಗೆ ಹೋಲಿಸಿದರೆ ಕೇವಲ 3%ದಷ್ಟು ನಿರುದ್ಯೋಗ ಪರಿಹರಿಸಿದಂತಾದೀತು, ಅಷ್ಟೆ! ಇದು ಸಾಗರದಲ್ಲಿ ಒಂದು ಹನಿ.

ಹೊಸ NREP ಕಾರ್ಯಕ್ರಮ ಗ್ರಾಮೀಣ ನಿರುದ್ಯೋಗವನ್ನು ಸಂಪೂರ್ಣವಾಗಿ ನಿವಾರಿಸುವ ಉದ್ದೇಶವನ್ನಂತೂ ಹೊಂದಿಲ್ಲ. ಆದರೆ ಪ್ರತಿಒಂದು ಕುಟುಂಬದ ಒಬ್ಬ ಸದಸ್ಯನಿಗಾದರೂ ಕನಿಷ್ಟ ಕೂಲಿಯ ದರದಲ್ಲಿ ವರ್ಷವಿಡೀ ಉದ್ಯೋಗ ಒದಗಿಸುವ ಗುರಿಯನ್ನು ಅದು ಹೊಂದಿದೆ. ಇದನ್ನು ಪರಾಂಬರಿಸಿ ನೋಡೋಣ. ಸರಕಾರದ ಅಂದಾಜಿನ ಪ್ರಕಾರವೇ ಭೂರಹಿತ ಕೂಲಿಕಾರರ ಕುಟುಂಬಗಳ ಸಂಖ್ಯೆ 2-2.5 ಕೋಟಿಗಳಾಗಬಹುದು ಅಂದರೆ 1984–85 ರಲ್ಲಿ ಹೊಸ ಕಾರ್ಯಕ್ರಮದಲ್ಲಿ ಶೇ. 6-7 ರಷ್ಟು ಭೂಹೀನ ಕುಟುಂಬಗಳಿಗೆ ಉದ್ಯೋಗ ದೊರಕೀತು. ಸರಕಾರದ ಇನ್ನೊಂದು ನಿರೀಕ್ಷೆಯಂತೆ ಬಡತನದ ರೇಖೆಯ ಕೆಳಗಿನ ಭೂಹೀನರ ಪ್ರತಿಕುಟುಂಬದ ಒಬ್ಬ ಸದಸ್ಯನಿಗೆ, ವರ್ಷಕ್ಕೆ 200 ದಿನಗಳ ಕನಿಷ್ಠ ಕೂಲಿಯದರದಲ್ಲಿ ಉದ್ಯೋಗ ಒದಗಿಸಬೇಕಾದರೆ 7000 ಕೋಟಿ ರೂ. ವೆಚ್ಚವಾಗುವುದು **ಬಡವರ ಕುರಿತು ಕಣ್ಣೀರು ಸುರಿಸುವ ಇಂದಿರಾ ಗಾಂಧಿ ಏಷ್ಯನ್ ಕ್ರೀಡೆಗಳಿಗೆ 1500 ಕೋಟಿ ರೂ. ವೆಚ್ಚ ಮಾಡಿದರೂ ಗ್ರಾಮೀಣ ಬಡ ಜನರಿಗೆ ಮುಂದಿನ ವರ್ಷ ಮೀಸಲಾಗಿಡುತ್ತೇನೆ ಅಂದಿದ್ದ 500 ಕೋಟಿ ರೂ. ಗಳಷ್ಟು–ಅಂದರೆ ಅಗತ್ಯವಿರುವ ಹಣದ ಕೇವಲ ಶೇ. 7 ರಷ್ಟು.**

ನಗರಗಳಲ್ಲಿ ಸ್ವಂತ ಉದ್ಯೋಗ

ಸ್ವಾತಂತ್ರ್ಯೋತ್ಸವದಂದು ಘೋಷಿಸಿದ ಎರಡನೇ ಕಾರ್ಯಕ್ರಮ–ನಗರಗಳಲ್ಲಿನ ವಿದ್ಯಾವಂತ ನಿರುದ್ಯೋಗಸ್ಥರು ಸ್ವಂತ ಉದ್ಯೋಗ ಪಡೆಯುವಂತೆ ನೆರವು ನೀಡುವುದು. ಅದಕ್ಕಾಗಿ ಸರಕಾರ ವರ್ಷಕ್ಕೆ 50 ಕೋಟಿ ರೂ. ಮೀಸಲಾಗಿಡುವುದು. ಮತ್ತು 160 ಕೋಟಿ ರೂ. ರಾಷ್ಟ್ರೀಕೃತ ಬ್ಯಾಂಕುಗಳು ನೆರವು ನೀಡಬೇಕಾಗುವುದು. ಒಟ್ಟು 210 ಕೋಟಿ ರೂ. ಗಳಲ್ಲಿ ಒಬ್ಬ ನಿರುದ್ಯೋಗಿಗೆ 25000 ರೂ. ನೆರವು ನೀಡುವುದಾದರೆ 84, 000 ನಿರುದ್ಯೋಗಿ ಯುವಕರಿಗೆ ಸಹಾಯ ಮಾಡಬಹುದು. ಒಬ್ಬರಿಗೆ 10,000 ರೂ. ಯಂತೆ 2 ಲಕ್ಷ ನಿರುದ್ಯೋಗಿ ಯುವಕರಿಗೆ ಸಹಾಯ ಮಾಡಬಹುದು. ಆದರೆ ಕೋಷ್ಟಕ-1ರಲ್ಲಿ ತೋರಿಸಿದಂತೆ 1985 ರಲ್ಲಿ ನಗರ ಪ್ರದೇಶಗಳಲ್ಲಿ ನಿರುದ್ಯೋಗಸ್ಥರ ಸಂಖ್ಯೆ 2.5 ಕೋಟಿ ಅಂದರೆ **1983-84 ಮತ್ತು 1984–85 ರಲ್ಲಿ ಒಟ್ಟು ಶೇಕಡ 1 ರಷ್ಟು ಯುವಕರಿಗಷ್ಟೆ ಸ್ವಂತ ಉದ್ಯೋಗ ಸ್ಥಾಪಿಸಲು ನೆರವು ನೀಡಬಹುದಾಗಿದೆ.** ಆರ್ಥಿಕ ಹಿಂಜರಿತದಿಂದ ಕೋಟಿಗಟ್ಟಲೆ ರೂ. ಬಂಡವಾಳವಿರುವ ಉದ್ಯಮಿಗಳೇ ದಿವಾಳಿಯಾಗುತ್ತಿರುವಾಗ 10 ಸಾವಿರ ರೂ. ಬಂಡವಾಳದ ಉದ್ಯಮಗಳು ಹೇಗೆ ಉಳಿದಾವು ಎಂಬುದಂತೂ ತಿಳಿಯದು.

ಇಂದಿರಾ ಸರಕಾರ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವಲ್ಲಿ ವಿಫಲವಾಗಿದೆ. ಚುನಾವಣೆ ಹತ್ತಿರ ಬರುತ್ತಿದ್ದಂತೆ ಬಡವರ ಓಟುಗಳ ಮೇಲೆ ಕಣ್ಣಿಟ್ಟು ಕೆಲವು ತುರ್ತಿನ ಕಾರ್ಯಕ್ರಮಗಳನ್ನು ಅದು ಘೋಷಿಸಿದೆಯಷ್ಟೆ. ಸರಕಾರದ ಸೋಲನ್ನು ಜನಸಾಮಾನ್ಯರಿಗೆ ಚೆನ್ನಾಗಿ ತಿಳಿಯಹೇಳಬೇಕು. ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕೆ ಶ್ರಮಿಕವರ್ಗದ ಸಂಘಟನೆಯನ್ನು ಬಲಪಡಿಸಬೇಕು. —

ಮಂಗಳೂರು ದರ್ಖಾಸ್ತುದಾರರಿಂದ ಸತ್ಯಾಗ್ರಹ

ತಾ. 30-9-1983 ರಂದು ದ. ಕ. ಜಿಲ್ಲಾ ರೈತ ಸಂಘದ ಕರೆಯ ಮೇರೆಗೆ ಮಂಗಳೂರು ತಾಲೂಕು ರೈತ ಸಂಘದ ವತಿಯಿಂದ ಆಗಮೆದಾರರ ಮತ್ತು ಮನೆ ನಿವೇಶನ ಹಕ್ಕು ಪತ್ರಕ್ಕೆ ಒತ್ತಾಯ ಮಾಡಿ ಸಾವಿರಾರು ಮಂದಿ ತಾಲ್ಲೂಕು ಕಛೇರಿಯಿಂದ ಸತ್ಯಾಗ್ರಹ ನಡೆಸಿದರು. ಸಂಜೆ ಎ.ಸಿ. ಯವರಿಗೆ ರಾಮಣ್ಣ ರೈ ಎಂ. ಪಿ., ಪಿ. ರಾಮಚಂದ್ರ ರಾವ್ ಎಂ.ಎಲ್.ಎ. ದ.ಕ. ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಕಾರ್ಯದರ್ಶಿ ಕೆ. ಆರ್. ಶ್ರೀಯಾನ್ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಎಂ. ಜನಾರ್ಧನ ನಾಯಕ್ ಇನ್ನು ಹಲವರು ನಿಯೋಗ ಹೋಗಿ ಮನವಿಯನ್ನು ಕೊಟ್ಟು ಪರಿಸ್ಥಿತಿ ವಿವರಿಸಿದರು. ಹಲವಾರು ವರ್ಷದಿಂದ ಸರಿಕಾರಿ ಭೂಮಿಯಲ್ಲಿ ಕೃಷಿ ಮಾಡಿ ವಾಸಮಾಡಿಕೊಂಡಿದ್ದರೂ ಇವರಿಗೆ ಡಿ. ನೋಟೀಸು ಕೊಡದೆ ತೊಂದರೆ ಕೊಡುವುದು ಐದು ಸೆಂಟ್ ನಿವೇಶನದಲ್ಲಿ ಮನೆ ಕಟ್ಟಿ ವಾಸ ಮಾಡುವವರಿಗೆ ಹಕ್ಕು ಪತ್ರ ಮತ್ತು ಅವರಿಗೆ ರೇಶನ್ ಕೊಡಬೇಕೆಂದು ದರ್ಖಾಸು ಅರ್ಜಿಸಲ್ಲಿಸಲು ಅವಧಿಯನ್ನು 5 ವರ್ಷ ಮುಂದುವರಿಸಬೇಕೆಂಬ ಮುಖ್ಯ ಬೇಡಿಕೆಯನ್ನು ಕೂಡಲೇ ಈಡೇರಿಸಬೇಕೆಂದು ಒತ್ತಾಯ ಮಾಡಲಾಯಿತು. ಸಂಜೆ ಜಿಲ್ಲಾ ರೈತ ಸಂಘದ ಕಾರ್ಯದರ್ಶಿಯು. ಜನಾರ್ಧನ ನಾಯಕ್ ಸತ್ಯಾಗ್ರಹದಲ್ಲಿ ಪಾಲುಗೊಂಡವರನ್ನು ಸ್ವಾಗತಿಸಿದರು. ಸಭೆಯಲ್ಲಿ ರಾಮಣ್ಣ ರೈ ಎಂ. ಪಿ. ಮತ್ತು ಪಿ. ರಾಮಚಂದ್ರ ರಾವ್ ಅವರು ಮಾತನಾಡಿದರು. —

ಎಸ್. ಎಫ್. ಐ. ಜಯಭೇರಿ

[3ನೇ ಪುಟದಿಂದ]

ಹೊಂದಿದ ಧೃಢ ನಿಲುವಿಗೆ ಅನುಗುಣವಾಗಿ ಘಟಕದ ಸೆಕ್ರೆಟೇರಿಯಟ್ ಸದಸ್ಯರು ಮಾತುಕತೆ ಪ್ರಾರಂಭಿಸಿದಾಗ AISF ಈ ಕರಾರುಗಳನ್ನು ನಿರಾಕರಿಸಿತು, ತಾನು ಏಕಾಂಗಿಯಾಗಿ ಸ್ಪರ್ಧಿಸುವ ನಿರ್ಧಾರವನ್ನು ಬಹಿರಂಗಗೊಳಿಸಿತು. ಈ ಪರಿಣಾಮವಾಗಿ ಒಂದೆಡೆ ಸಮಾಜವಾದಿ, ಮುಕ್ತಚಿಂತಕ ಒಕ್ಕೂಟ ಇನ್ನೊಂದೆಡೆ ನಕ್ಸಲೈಟ್ ಗುಂಪುಗಳಾದ PSO–PSF–SSO ಒಕ್ಕೂಟಗಳಿಗೆದುರಾಗಿ ಮತ್ತು AISF,ABVP, NSUI(I) ಗೆದುರಾಗಿ ಎಸ್.ಎಫ್.ಐ. ಏಕಾಂಗಿಯಾಗಿ ಸ್ಪರ್ಧಿಸಬೇಕಾಯಿತು. (ನೆಪಮಾತ್ರಕ್ಕೆ ನಕ್ಸಲ್ ಗುಂಪುಗಳು ಭಿನ್ನವಾಗಿ ಸ್ಪರ್ಧಿಸಿದ್ದರೂ ಅವರ ಬಹುಪಾಲು ಬೆಂಬಲ ಹಾಗೂ ಮತಗಳು ಎಸ್.ಎಫ್.ಐ. ವಿರೋಧಿ ಪ್ರಬಲ ಒಕ್ಕೂಟಕ್ಕೆ ಎನ್ನುವುದು ಇಲ್ಲಿ ರಹಸ್ಯದ ವಿಷಯವೇನಲ್ಲ) ಈ ಹಿನ್ನೆಲೆಯಲ್ಲಿ ಎಸ್.ಎಫ್.ಐ. ನ ಅದ್ಭುತ ವಿಜಯ ಗಮನಾರ್ಹವಾಗಿದೆ. ಎಸ್.ಎಫ್.ಐ. ಗೆದುರಾಗಿ ಸ್ಪರ್ಧಿಸಿದ ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೇಡರೇಶನ್‌ನ ಎಲ್ಲಾ ಅಭ್ಯರ್ಥಿಗಳು ಪರಾಭವಗೊಂಡಿದ್ದಾರೆ. ಆ ಸಂಘಟಣೆಗೆ ಈ ವರ್ಷದ ,ವಿದ್ಯಾರ್ಥಿ ಸಂಘದ ಕೌನ್ಸಿಲ್‌ನಲ್ಲಿ ಒಂದೂ ಪ್ರಾತಿನಿಧ್ಯವಿಲ್ಲ.

ABVP ಮತ್ತು NSUI (I) ಸ್ಥಾನಮಾನಗಳು :

ಆರ್.ಎಸ್.ಎಸ್. ನ ವಿದ್ಯಾರ್ಥಿ ವಿಭಾಗ ABVP ಹಾಗೂ ಕಾಂಗ್ರೆಸ್‌ನ ವಿದ್ಯಾರ್ಥಿ ವಿಭಾಗ NSUI (I) ಕಳೆದೊಂದು ವರ್ಷದಲ್ಲಿ ಇಲ್ಲಿ ತಲೆ ಎತ್ತಿವೆ. ಈ ಸಂಘಟಣೆಯ ಧುರೀಣರನ್ನೊಳಗೊಂಡು ಹಲವಾರು ಸದಸ್ಯರು ಕಳೆದ ವರ್ಷದವರೆಗೆ ಸಮಾಜವಾದಿ ಯುವಜನ ಸಭಾ ಅಥವ ಮುಕ್ತ ಚಿಂತಕರ ಸಂಘದ ಅಣೆಗಳ ಸದಸ್ಯರು ಬೆಂಬಲಿಗರು ಆಗಿದ್ದರೆನ್ನುವುದು ಇಲ್ಲಿಯ ವಿದ್ಯಾರ್ಥಿಗಳಿಗೆಲ್ಲ ಗೊತ್ತಿದೆ. ಎಸ್.ಎಫ್.ಐ. ನ ಕಾಂ॥ ರಶ್ಮಿ ಪಡೆದ 463 ಮತಗಳ ಜೊತೆ ಈ ಸಂಘಟಣೆಗಳಿಂದ ಅಧ್ಯಕ್ಷ ಪದಕ್ಕೆ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಪಡೆದ ಮತಗಳನ್ನು (ABVP 56 : NSUI (I) 48) ಹೋಲಿಸಿದರೆ ಈ ಸಂಘಟಣೆಗಳಿಗೆ ಜೆ.ಎನ್.ಯೂ. ನಲ್ಲಿರುವ ಸ್ಥಾನಮಾನ ಏನೆಂದು ಅರ್ಥವಾಗುತ್ತದೆ. ಕೋಮುವಾದ ಹಾಗೂ ಗೂಂಡಾಗಿರಿಯ ಬೀಜಗಳನ್ನು ಬಿತ್ತಲು ಜವಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ನೆಲ ಯೋಗ್ಯವಲ್ಲವೆನ್ನುವುದನ್ನು ಇಲ್ಲಿಯ ಪ್ರಜ್ಞಾವಂತ, ಎಡ-ಪ್ರಜಾಪ್ರಭುತ್ವವಾದಿ ಧೋರಣೆಯ ವಿದ್ಯಾರ್ಥಿಗಳು ಈ ಚುನಾವಣೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ.

ಹೊಣೆಗಾರಿಕೆ ಸಾಲು :

ದುರ್ಬಲ ಧುರೀಣತ್ವದ ಲಾಭ ಪಡೆದು ಕಾಂಗ್ರೆಸ್ ವರ್ತುಲಗಳ ನಿರ್ದೇಶನದ ಕೈಗೊಂಬೆಯಾಗಿ ವಿಶ್ವವಿದ್ಯಾಲಯದ ಆಡಳಿತ ವರ್ಗ ಕಳೆದೊಂದು ವರ್ಷದ ಅವದಿಯಲ್ಲಿ ವಿದ್ಯಾರ್ಥಿಗಳ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಮೊಟಕುಗೊಳಿಸಿದೆ. ಗಂಡು–ಹೆಣ್ಣುಗಳ ಸಂಪರ್ಕಕ್ಕೆ ಸಂಬಂಧಿಸಿದಂತೆ ಹಾಸ್ಯಾಸ್ಪದ ಹಾಸ್ಟೆಲ್ ಕಾನೂನುಗಳನ್ನು ಜಾರಿಗೊಳಿಸಿದೆ, ನಿರ್ಧಾರಕ ಸಮಿತಿ, ಉಪಸಮಿತಿಗಳಲ್ಲಿ ವಿದ್ಯಾರ್ಥಿಗಳು ಹೊಂದಿದ್ದ ಪ್ರಾತಿನಿಧ್ಯವನ್ನು ಕಡೆಗಣಿಸಿದೆ. ದೇಶದ ಎಲ್ಲಾ ಪ್ರದೇಶಗಳಿಂದ ನಿಮ್ನ ಜಾತಿ ವರ್ಗಗಳ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಬಂದು ಇಲ್ಲಿ ಅಭ್ಯಾಸಿಸಲು ಅನುವು ಮಾಡಿಕೊಟ್ಟ ಅದ್ವಿತೀಯವಾದ ಪ್ರವೇಶ ನಿಯಮ (Admission Polycy) ಯನ್ನು ಪರಿಷ್ಕರಿಸಿ ಈ ವಿಶ್ವವಿದ್ಯಾಲಯವನ್ನು ಸಂಪದ್ಭರಿತ ಕುಟುಂಬಗಳ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಸೀಮಿತಗೊಳಿಸುವ ಪ್ರಯತ್ನಗಳ ವಿರುದ್ಧ ಹೋರಾಡುವುದು ಅಗತ್ಯವಾಗಿದೆ. ಮುನ್ನೂರಕ್ಕೂ ಮೇಲ್ಪಟ್ಟ ಸದಸ್ಯರನ್ನು ಹೊಂದಿದ ಎಸ್.ಎಫ್.ಐ. ಜೆ.ಎನ್.ಯೂ. ದಲ್ಲಿ ಏಕಮಾತ್ರ ಬಲಿಷ್ಟ ಸಂಘಟಣೆ! ಈಗ ಆಯ್ಕೆಯಾಗಿರುವ ಅದರ ಅಭ್ಯರ್ಥಿಗಳಿಗೆ ವಿದ್ಯಾರ್ಥಿಗಳು ತಮ್ಮ ಮೇಲಿಟ್ಟ ವಿಶ್ವಾಸದ ಅರಿವು ಇದೆ. ಹೋರಾಟದ ಅನುಭವವಿದೆ ಮತ್ತು ವಿದ್ಯಾರ್ಥಿ ಚಳುವಳಿಯ ಕುರಿತು ಖಚಿತವಾದ ದೃಷ್ಟಿಕೋನವಿದೆ. ಅಂತೆಯೇ ಎಸ್.ಎಫ್.ಐ. ಈ ವಿಶ್ವವಿದ್ಯಾಲಯದಲ್ಲಿ ಪುನಃ ವಿದ್ಯಾರ್ಥಿ – ಶಿಕ್ಷಕರ ಮಧ್ಯೆ ಆರೋಗ್ಯಕರ ಸಂಬಂಧಗಳನ್ನು ನೆಲೆಗೊಳಿಸಿ ವಾತಾವರಣವನ್ನು ಮುನ್ನಿನಂತೆ ಆರೋಗ್ಯಪೂರ್ಣವಾಗಿಸುವಲ್ಲಿ, ವಿದ್ಯಾರ್ಥಿಗಳ ಹೋರಾಟವನ್ನು ಅರ್ಥಪೂರ್ಣಗೊಳಿಸುವಲ್ಲಿ ಇಲ್ಲಿಯ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಸಂದೇಹವಿಲ್ಲ.

—

ಮಂಗಳೂರಿನಲ್ಲಿ ನಾಗರೀಕರ ಸಭೆ

ಬಜಾಲ್ ಗ್ರಾಮದ ಶಾಂತಿನಗರ ಮತ್ತು ಫೈಸಲ್‌ನಗರ ನಿವಾಸಿಗಳ ಸಭೆಯೊಂದು ತಾ॥ 23–10–83 ರಂದು ಶ್ರೀ ಗಂಗಾಧರರವರ ಅಧ್ಯಕ್ಷತೆಯಲ್ಲಿ ಜರುಗಿತು. ಈ ಪ್ರದೇಶಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ, ರಸ್ತೆಯೊಂದನ್ನು ರಚಿಸುವಂತೆ ಮತ್ತು ನಿವಾಸಿಗಳಿಗೆ ಹಕ್ಕುಪತ್ರ ನೀಡುವಂತೆ ಒತ್ತಾಯಿಸುವ ಮನವಿಯೊಂದನ್ನು ಜಿಲ್ಲಾಧಿಕಾರಿಗೆ ಕೊಡುವ ನಿರ್ಣಯ ಕೈಗೊಳ್ಳಲಾಯಿತು. ಈ ಪ್ರದೇಶದಲ್ಲಿ ಜನಹಿತ ಕೆಲಸಗಳನ್ನು ಮಾಡಲು ಬೇಕಾದ ನಾಗರಿಕ ಸಮಿತಿಯೊಂದನ್ನು ಸಭೆಯಲ್ಲಿ ರಚಿಸಲಾಯಿತು. ಶ್ರೀ ಪೂವಪ್ಪಶಾಲಿಯಾನರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

—

ಕೇಂದ್ರ ರಾಜ್ಯ ಸಂಬಂಧಗಳು : ಶ್ರೀನಗರ ಸಮ್ಮೇಳನದ ನಿಲುವು

[4ನೇ ಪುಟದಿಂದ]

ಅಗತ್ಯವಾದ ತಿದ್ದುಪಡಿ ಮಾಡಬೇಕು. ಹಣ ಕಾಸಿನ ವರ್ಗಾವಣೆಯಲ್ಲಿ ಈಗ 70% ರಷ್ಟಕ್ಕೆ ಕೇಂದ್ರ ಹಣಕಾಸು ಮಂತ್ರಾಲಯ ಹಾಗೂ ಯೋಜನಾ ಆಯೋಗದ ಇಚ್ಛೆಗೊಳಪಟ್ಟಿವೆ. ಇದನ್ನು ನಿಲ್ಲಿಸಿ ಎಲ್ಲಾ ಹಣಕಾಸಿನ ವರ್ಗಾವಣೆಗಳು ಹಣಕಾಸಿನ ಆಯೋಗದ ಮೂಲಕ ನಡೆಯಬೇಕು. ಇಂತಹ ವರ್ಗಾವಣೆ ನಡೆಸುವಾಗ ಒಂದು ಕ್ಷೇತ್ರದ ಹಿಂದುಳಿದಿರುವಿಕೆ, ಒಟ್ಟು ಜನಸಂಖ್ಯೆಯಲ್ಲಿ ಹರಿಜನ ಹಾಗೂ ಬುಡಕಟ್ಟು ಜನರ ಅನುಪಾತವನ್ನು ಹಣ ಕಾಸಿನ ಆಯೋಗ ಗಮನದಲ್ಲಿಟ್ಟುಕೊಳ್ಳಬೇಕು.

ಈಗಿನ ವ್ಯವಸ್ಥೆಯಲ್ಲಿ ಕೇಂದ್ರದ ಯೋಜನಾ ಸಹಾಯದಲ್ಲಿ 70%ರಷ್ಟು ರಾಜ್ಯಗಳಿಗೆ ಸಾಲವಾಗಿ ಬರುತ್ತದೆ. ಇವೆಲ್ಲವನ್ನು ಸಹಾಯ ಧನವಾಗಿ ಪರಿಗಣಿಸಬೇಕು. ರಾಜ್ಯ ಸರಕಾರಗಳ ಸಾಲದ ಪರಿಶೀಲನೆ ನಡೆಸಲು, ಅದೇ ರೀತಿ ಕೇಂದ್ರದ ಸಾಲುಗಳನ್ನು ಕೂಡಾ ವಿಮರ್ಶಿಸಲು ರಾಷ್ಟ್ರೀಯ ಸಾಲ ಆಯೋಗ ರಚಿಸಬೇಕು. ಕೇಂದ್ರ ಮತ್ತು ರಾಜ್ಯಗಳ ಖರ್ಚು ವಿಧಾನಗಳ ಬಗ್ಗೆ ಸಲಹೆ ನಡೆಸಲು ರಾಷ್ಟ್ರೀಯ ಖರ್ಚು ಆಯೋಗ ರಚಿಸಬೇಕು.

ಕೇಂದ್ರದಿಂದ ರಾಜ್ಯಗಳಿಗೆ ಈ ರೀತಿ ಆರ್ಥಿಕ ಸಂಪನ್ಮೂಲಗಳ ವಿಕೇಂದ್ರೀಕರಣ ಮತ್ತಷ್ಟು ಮುಂದುವರಿದು ಪ್ರತಿಯೊಂದು ರಾಜ್ಯದ ಜಿಲ್ಲಾ ಪರಿಷತ್ತು, ಗ್ರಾಮ ಪಂಚಾಯತ್ ಇತ್ಯಾದಿ ಮಟ್ಟದ ವರೆಗೂ ಇಳಿಯಬೇಕು.

ಕೈಗಾರಿಕಾ (ಅಭಿವೃದ್ಧಿ ಮತ್ತು ಹತೋಟಿ) ಶಾಸನದ ಕಾರ್ಯ ನಿರ್ವಹಣೆಯನ್ನು, ಅಂತರ-ರಾಜ್ಯ ವ್ಯಾಪಾರವನ್ನು ಮಾಡುವ ಕೇಂದ್ರದ ಅಧಿಕಾರವನ್ನು ಪುನರ್ವಿಮರ್ಶಿಸಬೇಕು. ಉದಾಹರಣೆಗೆ, ಈಗ ಖಾಸಗೀ ವ್ಯವಹಾರಗಳು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಆಹಾರ ಧಾನ್ಯಗಳನ್ನು ಸಾಗಿಸಬಹುದು. ಆದರೆ ರಾಜ್ಯ ಸರಕಾರದ ಸಂಸ್ಥೆಗೆ ಆ ಅಧಿಕಾರವಿಲ್ಲ.

15 ರಿಂದ 20 ಪ್ರಮುಖ ಜೀವನಾವಶ್ಯಕ ಸಾಮಗ್ರಿಗಳು, ಆಹಾರಧಾನ್ಯಗಳು ಹಾಗೂ ಕೈಗಾರಿಕಾ ಕಚ್ಚಾ ಸಾಮಗ್ರಿಗಳು ದೇಶಾದ್ಯಂತ ಸಮಾನ ಬೆಲೆಗಳಿಗೆ ದೊರೆಯುವಂತೆ ಕೇಂದ್ರ ಸರಕಾರ ಅದರ ಜವಾಬ್ದಾರಿ ಹೇರುವಂತಾಗಬೇಕು. ಯಾಕೆಂದರೆ ಅವಶ್ಯಕ ಸಾಮಗ್ರಿಗಳು ಎಲ್ಲಾ ರಾಜ್ಯಗಳಿಗೆ ಒಂದೇ ತರದಲ್ಲಿ, ಸಮಾನ ಬೆಲೆಗಳಿಗೆ ಸಿಗುವಂತಿಲ್ಲವಾದರೆ ರಾಷ್ಟ್ರೀಯ ಏಕಸಿತೆಯ ಪರಿಕಲ್ಪನೆಯ ಹೊಳಪು ಬಹಳಷ್ಟು ಕಡಿಮೆ ಯಾಗುತ್ತಿದೆ. ಈ ಕೊರತೆಗಳನ್ನು ನಿವಾರಿಸಲು ಕೇಂದ್ರವು ರಾಜ್ಯಗಳ ಸಹಕಾರ ಪಡೆಯಬೇಕು.

—

ಇಂಟಿಕ್ ಬೊಬ್ಬೆಗೆ ಖಂಡನೆ

ಸಿ.ಐ.ಟಿ.ಯು. ನ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಸಭೆ 5–10–83 ರಂದು ಶಾಸಕ ಪಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಮಿಕ ಚಳುವಳಿಯಲ್ಲಿ ಪ್ರಜಾಪ್ರಭುತ್ವವನ್ನು ಮೂಲೆಗೆ ತಳ್ಳಿ ತುರ್ತು ಪರಿಸ್ಥಿತಿಯಲ್ಲಿ ಗುಂಡಾಗಿರಿ ನಡೆಸಿ ಅಧಿಕಾರದ ದುರುಪಯೋಗ ನಡೆಸಿಕೊಂಡು ಬಂದ ಅದ್ಯಂತಾಯಕ ನೇತೃತ್ವದ ಇಂಟಕ್ ಈಗ ಗುಂಡಾಗಿರಿ ನಡೆಯುತ್ತಿದೆಯೆಂದು ಬೊಬ್ಬಿಡುವ ರಾಜಕೀಯ ನಡೆಸುತ್ತಿದೆಯೆಂದು ಸಭೆ ಅದರ ಧೋರಣೆಯನ್ನು ಬಲವಾಗಿ ಖಂಡಿಸಿದೆ. ಕನಿಷ್ಟವೇತನ ನಿಗದಿ, ಬೆಲೆಏರಿಕೆ ತಡೆ, ನಿತ್ಯೋಪಯೋಗಿ ವಸ್ತುಗಳ ವಿವರಣೆ ಬಗ್ಗೆ ಸರಕಾರವನ್ನು ಒತ್ತಾಯಿಸುವ ನಿರ್ಣಯಗಳನ್ನು ಸಭೆ ಅಂಗೀಕರಿಸಿತು ಎಂದು ಕಾರ್ಯದರ್ಶಿ ಕಾಂ. ಮೂಸಬ್ಬನವರು ಹೇಳಿದ್ದಾರೆ.

ಮಾಗಡಿಯಲ್ಲಿ ರೈತರ ಬಹಿರಂಗ ಸಭೆ :

ದಿನಾಂಕ 14–10–83 ರಂದು ಕರ್ನಾಟಕ ಪ್ರಾಂತ ರೈತ ಸಂಘ ಮಾಗಡಿ ತಾಲ್ಲೂಕು ಸಮಿತಿ ಆಶ್ರಯದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಜಗದೀಶ್‌ರವರು ವಹಿಸಿದ್ದರು. ಸಭೆಯಲ್ಲಿ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಪಿ. ಜಗನ್ನಾಥ, ಜಿಲ್ಲಾ ಕಾರ್ಯದರ್ಶಿ ಲಕ್ಕಣ್ಣ, ರಾಮಯ್ಯ SFI ನ ರಾಜಣ್ಣ ರೈತರ ಸಮಸ್ಯೆಗಳು ಮತ್ತು ಅದರ ಪರಿಹಾರಕ್ಕಾಗಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸೇರಿ ನಿರಂತರ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಜಿ. ಸಿ. ಗಂಗಯ್ಯನವರು ಸ್ವಾಗತಿಸಿದರು. ಹರ್ಕಿ ನರಸಿಂಹಯ್ಯನವರ ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು.

ಗುಂಡ್ಲುಪೇಟೆ :

ಸಂಘಟನೆಯ ಹಾದಿಯಲ್ಲಿ ಬೀಡಿ ಕಾರ್ಮಿಕರು

ಮೈಸೂರು ಜಿಲ್ಲೆಯ ಗುಂಡ್ಲುಪೇಟೆಯ ತಾಲ್ಲೂಕು ಕೇಂದ್ರದಲ್ಲಿ 9–10–1983 ರಂದು ಸಭೆ ಸೇರಿದ್ದ ಬೀಡಿ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಸಂಘಟಿತ ಹೋರಾಟ ನಡೆಸಲು ನಿರ್ಧರಿಸಿದರು. ಈ ಬಗ್ಗೆ 20 ಜನ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ. ಕನಿಷ್ಠ ಕೂಲಿ, ಬೋನಸ್, ಪ್ರಾವಿಡೆಂಟ್ ಫಂಡ್, ಹೆರಿಗೆ ಭತ್ತೆ ಇವೇ ಮೊದಲಾದ ಕನಿಷ್ಠ ಕಾನೂನು ಬದ್ಧ ಸೌಲಭ್ಯಗಳಿಂದಲೂ ವಂಚಿತರಾಗಿರುವ ಇಲ್ಲಿನ ಸಾವಿರಾರು ಬೀಡಿ ಕಾರ್ಮಿಕರು ಅತೀವ ಶೋಷಣೆಗೆ ಒಳಗಾಗಿದ್ದು ಸಂಘಟಿತ ಹೋರಾಟವೊಂದೇ ಸಮಸ್ಯೆಗಳ ಪರಿಹಾರಕ್ಕೆ ಇರುವ ಏಕೈಕ ದಾರಿ ಎಂದು ಗುರುತಿಸಿಕೊಂಡಿದ್ದಾರೆ.

ಸಭೆಯನ್ನುದ್ದೇಶಿಸಿ ಮೈಸೂರು ಜಿಲ್ಲಾ CITU ಅಧ್ಯಕ್ಷರಾದ ಕಾಂ. ಎಂ. ಎನ್. ಉಗ್ರಪ್ಪ ಮತ್ತು ರಾಜ್ಯ ಎಸ್. ಎಫ್. ಐ. ಅಧ್ಯಕ್ಷರಾದ ಕಾಂ. ಆರ್. ಜಯಕುಮಾರ್ ಮಾತನಾಡಿದರು.

ಬೆಂಗಳೂರು :

ಆಟೋ ಚಾಲಕರ ಸಂಘದ ಸರ್ವಸದಸ್ಯರ ಸಭೆ

ಆಟೋರಿಕ್ಷಾ ಚಾಲಕರ ಸಂಘದ 9ನೇ ವಾರ್ಷಿಕೋತ್ಸವ ಮತ್ತು ಸರ್ವ ಸದಸ್ಯರ ಸಭೆಯು ದಿನಾಂಕ 23-10-83 ರಂದು ಸಂಘದ ಅಧ್ಯಕ್ಷರಾದ ಕಾಂ॥ ಕೆ. ಆರ್. ವೆಂಕಟೇಶ ಗೌಡರ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 11 ಘಂಟೆಗೆ ಸೇರಿ ಸಂಜೆ 6 ಘಂಟೆಯ ವರಿಗೆ ನಡೆಯಿತು. ಪ್ರಧಾನ ಕಾರ್ಯದರ್ಶಿ ಕಾಂ॥ ಎ. ವಿ. ರಮೇಶ್ ಸ್ವಾಗತ ಭಾಷಣ ಮಾಡಿ ಸಂಘದ 9 ವರ್ಷಗಳ ಸಾಧನೆಯನ್ನು ವಿವರಿಸಿದರು

ಮುಖ್ಯ ಅತಿಥಿಗಳಾಗಿ ಬಂದಿದ್ದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಶಾಸಕರಾದ ಕಾಂ। ಪಿ. ರಾಮಚಂದ್ರ ರಾವ್ ಅವರು ತಮ್ಮ ಭಾಷಣದಲ್ಲಿ ಆಟೋ ಚಾಲಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಸಂಘವು ಕಾರ್ಯಕ್ರಮಗಳನ್ನು ರೂಪಿಸಿ ಬಲವಾದ ಹೋರಾಟಗಳನ್ನು ಮಾಡಬೇಕೆಂದೂ, ರಾಜ್ಯದ ಚಾಲಕರು ಒಂದಾಗಿ ಫೇಡರೇಶನ್ ರಚಿಸಿಕೊಳ್ಳಲು ಕರೆ ನೀಡಿದರು. ಖಜಾಂಚಿ ಕಾಂ। ಬಿ. ಕೆ. ನಾಗರಾಜ್ ಲೆಕ್ಕಪತ್ರದ ವರದಿಯನ್ನು ಮಾಡಿದರು. ಪ್ರಧಾನ ಕಾರ್ಯದರ್ಶಿ ಕಾಂ। ಎ. ವಿ. ರಮೇಶ ಸಂಘದ ಸಂಘಟನಾ ವರದಿಯನ್ನು ಮಾಡಿದ ಮೇಲೆ 15 ಸದಸ್ಯರುಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಮಾತನಾಡಿದರು.

ಆಟೋ ಚಾಲಕರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಹಲವಾರು ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

ಕೆಳಕಂಡವರು ಪದಾಧಿಕಾರಿಗಳಾಗಿ ಸರ್ವಾನುಮತದಿಂದ ಆಯ್ಕೆಯಾದರು. ಬಿ. ಸುಬ್ಬರಾವ್, ಅಧ್ಯಕ್ಷರು, ವಿ. ಸಿ. ನರಸಿಂಹನ್, ಕೆ. ಎಲ್. ಜಾನ್‌ಸನ್, ಉಪಾಧ್ಯಕ್ಷರುಗಳು, ಎ.ವಿ. ರಮೇಶ್, ಪ್ರಧಾನ ಕಾರ್ಯದರ್ಶಿ, ಎಚ್.ಆರ್. ವಿ. ರವಿ, ಜಂಟಿಕಾರ್ಯದರ್ಶಿ, ಎಸ್. ಸುಬ್ರಮಣಿ, ಸಹ. ಕಾರ್ಯದರ್ಶಿ ಬಿ.ಕೆ. ನಾಗರಾಜ್, ಖಜಾಂಚಿ ಮತ್ತು ಕಾರ್ಯಕಾರಿ ಸಮಿತಿಗೆ 16 ಜನ ಸದಸ್ಯರನ್ನು ಆರಿಸಲಾಗಿದೆ.

—

ಮುಂಬೈ ಎ. ಐ. ಸಿ. ಸಿ. ಅಧಿವೇಶನ

[2ನೇ ಪುಟದಿಂದ]

ಸದಸ್ಯರ ಯೋಚನಾ ವೈಖರಿಯಲ್ಲೇ ಗಂಭೀರ ವ್ಯತ್ಯಾಸವಿದೆ. ಒಮ್ಮತ ಅಗತ್ಯವಿರುವ ವಿಷಯಗಳ ಬಗ್ಗೆ ಮುಕ್ತ ಚರ್ಚೆಗೆ ಆಳುವ ಪಕ್ಷ ಸಿದ್ಧವಾಗಿದೆಯೋ? ಅಥವ ಒಮ್ಮತದ ಅರ್ಥವೆಂದರೆ ಆಳುವ ಪಕ್ಷ ತಳೆದ ನಿಲುವನ್ನು ವಿರೋಧ ಪಕ್ಷಗಳು ತಲೆಬಾಗಿ ಸ್ವೀಕರಿಸಬೇಕೆಂದೇ ?

ಉದಾಹರಣೆಗೆ ಯೋಜನೆ ಮತ್ತು ಸ್ವಾವಲಂಬನೆಯ ಪ್ರಶ್ನೆ ತಗೊಳ್ಳಿ. ಯೋಜನಾ ಪ್ರಕ್ರಿಯೆ ಆರಂಭದಾಗಿನಿಂದಲೇ ಈ ಬಗ್ಗೆ ಎಡಪಕ್ಷಗಳು ಆಳುವ ಪಕ್ಷಕ್ಕಿಂತ ಭಿನ್ನವಾದ ಅಭಿಪ್ರಾಯ ವ್ಯಕ್ತಪಡಿಸಿದವು ಎಡ ನೇತೃತ್ವದ ಸರಕಾರಗಳು ಹಾಗೂ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಅವುಗಳ ವಕ್ತಾರರು ಯೋಜನೆಗಳ ಮೇಲಿನ ಚರ್ಚೆಯಲ್ಲಿ ತಮ್ಮ ಘೋರಣೆಯನ್ನು ವಿವರಿಸಿದ್ದಾರೆ. ರಾಷ್ಟ್ರೀಯ ಒಮ್ಮತಾಭಿಪ್ರಾಯದ ಹೆಸರಿನಲ್ಲ ಎಡ ಪಕ್ಷಗಳು ತಮ್ಮ ಈ ಅಭಿಪ್ರಾಯಗಳನ್ನು ಬಿಟ್ಟುಬಿಡಬೇಕೆಂದು ಆಳುವ ಪಕ್ಷದ ನಾಯಕರು ನೀರೀಕ್ಷಿಸುವರೇ ಅದೊಂದು ಮಿತಿಮೀರಿದ ನಿರೀಕ್ಷೆ !

ರಾಷ್ಟ್ರೀಯ ಐಕ್ಯತೆ ಮತ್ತು ಜಾತ್ಯಾತೀಯತೆಯ ಪ್ರಶ್ನೆಯನ್ನು ತಗೊಳ್ಳೋಣ. ಜಾತ್ಯಾತೀಯತೆ ಎಂದರೆ ಧರ್ಮ ಹಾಗೂ ರಾಜಕೀಯವನ್ನು ಪರಸ್ಪರ ಹಾಗೂ ಸಂಪೂರ್ಣವಾಗಿ ಪ್ರತ್ಯೇಕಿಸುವುದು ಎಂದು ಹೇಳುವ ಬದಲು ರಾಜಕೀಯದಲ್ಲಿ ಹಸ್ತಕ್ಷೇಪ ನಡೆಸಲು ಎಲ್ಲಾ ಧಾರ್ಮಿಕ ಗುಂಪುಗಳಿಗಿರುವ ಹಕ್ಕು ಎಂದು ಅದನ್ನು "ಅರ್ಥೈಸಿ" ಆಳುವ ಪಕ್ಷದ ನಾಯಕರು ಸಂಕುಚಿತ ದೃಷ್ಟಿಯ ಶಕ್ತಿಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ ಎಂದು ಎಡಪಂಥೀಯರು ಎಲ್ಲರೂ ಮಾತ್ರವಲ್ಲ ಆಳುವ ಪಕ್ಷದಲ್ಲೂ ಸಾಕಷ್ಟು ಮಂದಿ ಅಭಿಪ್ರಾಯಪಡುತ್ತಿದ್ದಾರೆ. ಆಳುವ ಪಕ್ಷದ ಮತ್ತು ಸರಕಾರದ ನಾಯಕರು ತಮ್ಮ ಸದ್ಯದ ವೈಖರಿಯನ್ನು ಬದಲಿಸದೆ ಜಾತಿವಾದ ಕೋಮುವಾದದ ವಿರುದ್ಧ ಪರಿಣಾಮಕಾರೀ ಹೋರಾಟ ನಡೆಸಿ ಅವನ್ನು ಸೋಲಿಸುವುದು ಸಾಧ್ಯವಾಗಲಾರದು. ಈ ನಿಲುವನ್ನು ಎಡಪಕ್ಷಗಳು ಬಿಟ್ಟು ಬಿಡಬೇಕೆಂದು ಅವರು ನಿರೀಕ್ಷಿಸುತ್ತಾರೆಯೇ? ಇದು ಇನ್ನೊಂದು ಮಿತಿಮೀರಿದ ನಿರೀಕ್ಷೆ !

ರಾಷ್ಟ್ರೀಯ ರಕ್ಷಣೆ, ಅಲಿಪ್ತತೆ ಹಾಗೂ ಜಾಗತಿಕ ಶಾಂತಿಯ ಬಗ್ಗೆ ಹೇಳುವುದಾದರೆ ಎಡಪಕ್ಷಗಳೂ ಸೇರಿದಂತೆ ವಿರೋಧ ಪಕ್ಷಗಳ ದೊಡ್ಡ ವಿಭಾಗ ಸರಕಾರಕ್ಕೆ ಪ್ರಾಮಾಣಿಕ ಬೆಂಬಲ ನೀಡಲು ಸಿದ್ಧವಿದೆಯೆಂದು ಸ್ಪಷ್ಟಪಡಿಸಿದೆ. ಆದರೆ ಪ್ರಶ್ನೆಯಿಷ್ಟೆ —ಸರಕಾರ ಅವರ ಸಹಕಾರವನ್ನು ಪಡೆಯಲು ಆತುರವಾಗಿದೆಯೇ? ಹಾಗಿದ್ದರೆ, ಅವರು ನಿರೀಕ್ಷಿಸುವ ಸಹಕಾರ ಯಾವ ಬಗೆಯದು ?

ಇದು ಮುಖ್ಯ ಪ್ರಶ್ನೆ. ಯಾಕೆಂದರೆ ದೇಶವನ್ನು ಹೇಗೆ ರಕ್ಷಿಸಬೇಕು, ಅಲಿಪ್ತತೆ ಹಾಗೂ ಜಾಗತಿಕ ಶಾಂತಿಯನ್ನು ಹೇಗೆ ಕಾಪಾಡಬೇಕು ಎಂಬುದರ ಬಗ್ಗೆ ಎಡ ಮತ್ತು ಪ್ರಜಾಪ್ರಭುತ್ವವಾದೀ ವಿರೋಧ ಪಕ್ಷಗಳಿಗೆ ತಮ್ಮದೇ ಆದ ಅಭಿಪ್ರಾಯಗಳಿವೆ. ಸರಕಾರ ನಮ್ಮ ಸಹಕಾರ ಬಯಸುವುದಾದರೆ. ಒಮ್ಮತಕ್ಕೆ ಬರಲು ಸಾಧ್ಯವಾಗುವ ಹಾಗೂ ಸಮಾನವಾದ ಧ್ಯೇಯವನ್ನು ಕಾರ್ಯರೂಪಕ್ಕಿಳಿಸುವ ಬಗ್ಗೆ ನಮ್ಮೊಡನೆ ಸಮಾಲೋಚಿಸಲು ಸರಕಾರ ಸಿದ್ಧವಾಗಿರಬೇಕು. ಇದಕ್ಕೆ ವ್ಯತಿರಿಕ್ತವಾಗಿ ಆಳುವ ಪಕ್ಷದ ನಾಯಕರು ಹೇಳಿದ್ದಕ್ಕೆ ಮಾತ್ರ ನಾವು ಸೈಗುಟ್ಟಬೇಕು ಎಂದು ನಿರೀಕ್ಷಿಸುವುದಾದರೆ, ಅದು ಮತ್ತೊಂದು ಮಿತಿಮೀರಿದ ನಿರೀಕ್ಷೆ.

ಕೊನೆಯಲ್ಲಿ ಆಳುವ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವಿನ ಸಂಬಂಧಗಳ ಬಗ್ಗೆ ಒಂದು ಮಹತ್ವಪೂರ್ಣ ಅಂಶವನ್ನು ಗಮನಿಸಬೇಕು. ಆಳುವ ಪಕ್ಷವೀಗ ವಿರೋಧಪಕ್ಷಗಳನ್ನು ಬಾಯಿ ಮುಚ್ಚಿಸುವ ಅಥವಾ ನಿರ್ಲಕ್ಷಿಸುವ ಸ್ಥಿತಿಯಲ್ಲಿಲ್ಲ. ರಾಜ್ಯ ಸ್ವಾಯತ್ತತೆಯ ವಿಷಯದಲ್ಲಿ ಕನಿಷ್ಟವೆಂದರೆ ಐದಾದರೂ ಮುಖ್ಯಮಂತ್ರಿಗಳು ಇತರ ವಿರೋಧ ಪಕ್ಷಗಳೊಡನೆ ಸೇರಿಕೊಂಡಿದ್ದಾರೆ ಎಂದು ಶ್ರೀನಗರದ ಒಮ್ಮತಭಿಪ್ರಾಯ ತೋರಿಸಿಕೊಟ್ಟಿದೆ, ಆರನೇ ಮುಖ್ಯಮಂತ್ರಿ, ತಮಿಳುನಾಡಿನ ರಾಮಚಂದ್ರನ್ ಕೂಡಾ ರಾಜಕೀಯವಾಗಿ ಕಾಂಗ್ರೆಸ್ (ಐ.) ಕಡೆಗೆ ವಾಲಿದ್ದರೂ, ರಾಜ್ಯ ಸ್ವಾಯತ್ತತೆಯ ಬಗ್ಗೆ ಹೋರಾಟವನ್ನು ತ್ಯಜಿಸುವುದು ಅವರಿಗೆ ಸಾಧ್ಯವಿಲ್ಲ, ವಿರೋಧ ಪಕ್ಷಗಳನ್ನು "ಅನೀತಿಯುತ" ಎಂದು ರೂಪಿಸಿ ಅಥವಾ ಕೇರಳದಲ್ಲಿ ಮಾಡಿರುವಂತೆ "ನೀತಿಬದ್ಧ" ಕೂಟ ಮಾಡಿಕೊಂಡು ಆಳುವ ಪಕ್ಷವನ್ನು ಉಳಿಸುವುದು ಸಾಧ್ಯವಿಲ್ಲ. ವಿರೋಧ ಪಕ್ಷಗಳ ಬಗ್ಗೆ ವಾಸ್ತವತೆಯನ್ನು ಸ್ವೀಕರಿಸಿ, ಅವುಗಳೊಂದಿಗೆ ಬಾಳಲು ಪ್ರಯತ್ನಿಸುವುದು ಅದಕ್ಕೆ ವಿವೇಕಯುತವಾದ ಮಾರ್ಗ. ಎ.ಐ.ಸಿ.ಸಿ. (ಐ.) ಸಭೆಯಲ್ಲಿ ಮಾಡಿದಂತೆ ವಿರೋಧ ಪಕ್ಷಗಳ ವಿರುದ್ಧ ಚಿತ್ತೋದ್ರೇಕದಿಂದ ದೂಷಿಸುವುದರಿಂದ ದೇಶಕ್ಕೂ ಒಳಿತಾಗದು, ಸ್ವತಃ ಆಳುವ ಪಕ್ಷಕ್ಕೂ ಒಳಿತಾಗದು. —

ಕೃಷಿ ಜಮೀನಿಗೆ ನಗರಾಸ್ತಿ ಮಿತಿ ವಿನಾಯಿತಿ

ಕರ್ನಾಟಕ ಪ್ರಾಂತ, ರೈತಸಂಘದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಸೆಪ್ಟೆಂಬರ್ 18 ರ ತನ್ನ ಸಭೆಯಲ್ಲಿ ಕೃಷಿ ಜಮೀನಿಗೆ ನಗರಾಸ್ತಿಮಿತಿ ಕಾನೂನಿನಿಂದ ವಿನಾಯಿತಿ ಪಡೆಯುವ ಬಗ್ಗೆ ಕೈಗೊಂಡ ನಿರ್ಣಯದ ಕುರಿತು ಮಂಗಳೂರಿನ ಜಿಲ್ಲಾಧಿಕಾರಿಯವರು ಪತ್ರ ಬರೆದು ವಿವರಣೆ ನೀಡಿದ್ದಾರೆ. ಈ ಕಾನೂನಿನ ಸೆಕ್ಷನ್ 20 ರ ಪ್ರಕಾರ ಹಿಡುವಳಿಗಾರರು ವಾಸ್ತವಿಕವಾಗಿ ಬೇಸಾಯ ಮಾಡುವ ಜಮೀನಿಗೆ ವಿನಾಯಿತಿಯಿದೆ ಎಂದು ಆ ಪತ್ರದಲ್ಲಿ ತಿಳಿಸಿದ್ದಾರೆ. ಸಂಬಂಧಪಟ್ಟ ಹಿಡುವಳಿದಾರರು 10 ರೂ. ಕೋರ್ಟ್ ಫೀ ಸ್ಟಾಂಪು ಲಗ್ತೀಕರಿಸಿ ಅರ್ಜಿಗಳನ್ನು ಸರಕಾರಕ್ಕೆ ಬರೆದುಕೊಳ್ಳಬೇಕಾಗಿ ಸಂಘದ ಪರವಾಗಿ ಕಾಂ. ಜನಾರ್ಧನ ನಾಯಕರು ವಿನಂತಿಸಿಕೊಂಡಿದ್ದಾರೆ. —

ಕೆನರಾ ಬ್ಯಾಂಕ್ ನೌಕರರ ಹೋರಾಟಕ್ಕೆ ಬೆಂಬಲ

(ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಕೆಳಕಂಡ ಪತ್ರಿಕಾ ಹೇಳಿಕೆಯನ್ನು ಕೊಟ್ಟಿರುತ್ತಾರೆ

ಕೆನರಾ ಬ್ಯಾಂಕ್ ಸ್ಟಾಫ್ ಯೂನಿಯನ್ನಿನ ನೇತೃತ್ವದಲ್ಲಿ ಕೆನರಾ ಬ್ಯಾಂಕ್ ನೌಕರರು ಕೆನರಾ ಬ್ಯಾಂಕ್ ಮುಖ್ಯ ಕಛೇರಿಯ ಮುಂದೆ ಸರದಿ ಉಪವಾಸ ಸತ್ಯಾಗ್ರಹವನ್ನು 24-10-83 ರಿಂದ ನಡೆಸುತ್ತಿದ್ದಾರೆ.

ಅವರ ಬೇಡಿಕೆಗಳು :

1) ಹರಿಜನ, ಗಿರಿಜನ, ಮಾಜಿ ಸೈನಿಕರಿಗೆ ಮೀಸಲಾತಿಗೆ ಸಂಬಂಧಿಸಿದ ನಿರ್ದೇಶನಗಳನ್ನು ಜಾರಿ ಮಾಡುವುದು.

2] ಸಮಾಜದ ಬಡ ಮತ್ತು ದುರ್ಬಲವಿಭಾಗಗಳ ಏಳಿಗೆಗಾಗಿ ಒಂದು ಕಲ್ಯಾಣ ನಿಧಿಯ ರಚನೆ.

3] ಹುದ್ದೆಗಳನ್ನು ಕಡಿಮೆ ಮಾಡಿ ನಿರುದ್ಯೋಗವನ್ನು ಹೆಚ್ಚಿಸುವ ಗಣಕಗಳ ಪ್ರತಿಷ್ಠಾಪನೆಯನ್ನು ವಿರೋಧಿಸುವುದು.

4] ಸಾಮೂಹಿಕ ವರ್ಗಾವಣೆಗಳನ್ನು ವಿರೋಧಿಸುವುದು.

5] ಸಬ್ಸಿಡೈಸ್ಟ ಉಪಹಾರ ಗೃಹಗಳನ್ನು ಏರ್ಪಡಿಸುವುದು.

6] ಉತ್ತಮ ಸೇವಾ ಪರಿಸ್ಥಿತಿ.

7] ಉಪಸಿಬ್ಬಂದಿ ಮತ್ತು ಗುಮಾಸ್ತರಿಗೆ ಉತ್ತಮ ಬಡ್ತಿಯ ಅವಕಾಶ- ಇವುಗಳನ್ನು ಒಳಗೊಂಡಿವೆ.

ಸಾರ್ವಜನಿಕ ಕ್ಷೇತ್ರದಲ್ಲಿರುವ ಈ ಬ್ಯಾಂಕಿನ ಆಡಳಿತ ಮಂಡಳಿಯು ಕೆನರಾ ಬ್ಯಾಂಕ್ ಸ್ಟಾಫ್ ಯುನಿಯನ್ನೊಂದಿಗೆ ಮಾತುಕತೆ ನಡೆಸಿ ಒಂದು ಒಪ್ಪಂದಕ್ಕೆ ಬರುವುದಕ್ಕೆ ಬದಲಾಗಿ ಸಂಘದ ಕ್ರಿಯಾಶೀಲ ಕಾರ್ಯಕರ್ತರನ್ನು ಅಮಾನತ್ತಿನಲ್ಲಿಡುವುದು, 200 ಮಂದಿಗೆ ಚಾರ್ಜ್‌ಶೀಟ್ ಕೊಡುವುದು, ಮೊದಲಾದ ದಮನಕಾರಿ ಕ್ರಮಗಳಲ್ಲಿ ತೊಡಗಿದೆ.

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಸಮಿತಿಯು ಆಡಳಿತ ಮಂಡಳಿಯ ಈ ದಮನಕಾರಿ ಕೃತ್ಯಗಳನ್ನು ಖಂಡಿಸುತ್ತದೆ ಮತ್ತು ನೌಕರರ ಹೋರಾಟಕ್ಕೆ ಬೆಂಬಲ ಕೊಡುತ್ತದೆ. —

ಡಿಸೆಂಬರ್‌ನಲ್ಲಿ ಡಿ. ವೈ. ಎಫ್. ಐ. ಎರಡನೇ ರಾಜ್ಯ ಸಮ್ಮೇಳನ ಹೊಸಪೇಟೆಯಲ್ಲಿ

ಡಿ. ವೈ. ಎಫ್. ಐ. ಕರ್ನಾಟಕ ರಾಜ್ಯ ಸಂಘಟನಾ ಸಮಿತಿಯ ಸಭೆಯು ಬೆಂಗಳೂರಿನಲ್ಲಿ ಕಾಂ। ಜಯಶೇಖರ್ ಅವರ ಅಧ್ಯಕ್ಷತೆಯಲ್ಲಿ 1983, ಅಕ್ಟೋಬರ್ 8–9 ರಂದು ನಡೆಯಿತು.

1983ರ ಸದಸ್ಯತ್ವವನ್ನು ಅಕ್ಟೋಬರ್ 31 ರೊಳಗೆ ಎಲ್ಲಾ ಜಿಲ್ಲಾ ಸಮಿತಿಗಳು ಸಂಘಟನಾ ಸಮಿತಿಗೆ ಮೊತ್ತ ಹಾಗೂ ಕೌಂಟರ್ ಫೈಲುಗಳನ್ನು ಅಂತಿಮವಾಗಿ ಕಳುಹಿಸಬೇಕೆಂದೂ ಮತ್ತು ಸದಸ್ಯತ್ವವನ್ನು 1984 ಜನವರಿಯಿಂದ ಮುಂದುವರಿಸಬಹುದೆಂದು ನಿರ್ಣಯಿಸಲಾಗಿದೆ.

2ನೇ ರಾಜ್ಯ ಸಮ್ಮೇಳನವನ್ನು ಹೊಸಪೇಟೆಯಲ್ಲಿ 1983 ಡಿಸೆಂಬರ್ ಮೊದಲ ವಾರದಲ್ಲಿ ನಡೆಸಬೇಕೆಂದೂ, ಪ್ರತಿನಿಧಿ, ವೀಕ್ಷಕರು ತಲಾ ಹತ್ತು ರೂಪಾಯಿಗಳನ್ನು ಪ್ರತಿನಿಧಿಶುಲ್ಕ ನೀಡಬೇಕೆಂದು ತೀರ್ಮಾನಿಸಲಾಗಿದೆ. ತಲಾ 50 ಸದಸ್ಯತ್ವಕ್ಕೆ ಒಬ್ಬ ಪ್ರತಿನಿಧಿ ಇರಬೇಕೆಂದೂ ವೀಕ್ಷಕರನ್ನು ತಾಲ್ಲೂಕ್, ಹೋಬಳಿ, ಏರಿಯಾಗಳನ್ನು ನೋಡಿಕೊಂಡು ಸಂಘಟನೆಯನ್ನು ಮುಂದೆ ವಿಸ್ತರಿಸಲು ಪ್ರತಿ ಜಿಲ್ಲೆಯೂ 3–4 ವೀಕ್ಷಕರನ್ನು ಕಳಿಸಬೇಕೆಂದು ತೀರ್ಮಾನಿಸಲಾಗಿದೆ.

2ನೇ ರಾಜ್ಯ ಹಾಗೂ ರಾಷ್ಟ್ರ ಸಮ್ಮೇಳನಗಳು ನಡೆಯುವುದರಿಂದ ಕಾಲಾವಧಿ ತುಂಬ ಕಮ್ಮಿ ಇರುವುದರಿಂದ ತಾಲ್ಲೂಕ್, ಜಿಲ್ಲಾ ಸಮ್ಮೇಳನಗಳನ್ನು 1984 ಮಾರ್ಚ್‌ನಿಂದ ಜುಲೈ ತಿಂಗಳುಗಳೊಳಗಾಗಿ ನಡೆಸಬಹುದೆಂದು ತೀರ್ಮಾನಿಸಲಾಗಿದೆ.

2ನೇ ರಾಜ್ಯ ಸಮ್ಮೇಳನಕ್ಕೆ ನಿಧಿ ಸಂಗ್ರಹಿಸಿ ಸಹಕರಿಸುವ ಸಂಗಾತಿಗಳು ಸಂಘಟನಾ ಸಮಿತಿಗೆ ಬರೆದುಕೊಳ್ಳಬೇಕೆಂದೂ, ನಿಧಿ ಸಂಗ್ರಹಿಸಿ ಕಾಂ॥ ರಾಮಚಂದ್ರ ನಾವಡ, ಹೊಸಪೇಟೆ ಇವರ ಹೆಸರಿಗೆ ಕಳುಹಿಸಿಕೊಡಬೇಕೆಂದು ವಿನಂತಿಸಲಾಗಿದೆ.

ವಂದನೆಗಳು

ಎಸ್. ಶಿವರಾಂ,
ಸಂಚಾಲಕ.

ಸಿ. ಐ. ಟಿ. ಯು. ವರ್ಕಿಂಗ್ ಕಮಿಟಿ ಸಭೆ

ಸಿ. ಐ. ಟಿ. ಯು. ನ ವರ್ಕಿಂಗ್ ಕಮಿಟಿ ಸಭೆಯು ನವೆಂಬರ್ 30, ಡಿಸೆಂಬರ್ 1 ಮತ್ತು 2 ರಂದು ಜಮ್‌ಷೆಡ್‌ಪುರದಲ್ಲಿ ನಡೆಯುತ್ತದೆ.

ಎಲ್ಲಾ ಸದಸ್ಯರೂ ನವೆಂಬರ್ 30, 1983 ರ ಒಳಗಾಗಿ ಜಮ್‌ಷೆಡ್‌ಪುರ ತಲುಪಬೇಕಾಗಿ ವಿನಂತಿಸಲಾಗಿದೆ.

ರಿಟರ್ನ್ ರಿಸರ್ವೇಶನ್‌ಗಾಗಿ ಹಣಕಟ್ಟಲು ಕೆಳಕಂಡವರಿಗೆ ಬರೆಯಿರಿ,

K. K. TRIPATHI
President
Tisco Karmachari Union
New Kasidih Planning area,
St. Mile Road, P. O. Sachi
Jamshedpur - 831 001

ಮೈಕೋ ವರದಿ - ತಿದ್ದುಪಡಿ

"ಐಕ್ಯರಂಗ"ದ ಅಕ್ಟೋಬರ್ 23, 1983ರ ಸಂಚಿಕೆಯಲ್ಲಿ ಪ್ರಕಟವಾದ "ಮೈಕೋ-ಬಾಸ್ ಜತೆ ಒಪ್ಪಂದ ಪ್ರಜಾಪ್ರಭುತ್ವ ವಿರೋಧಿ" ಎಂಬ ವರದಿ (ಪುಟ 6) ಯಲ್ಲಿ ಮಾರ್ಚ್ ತಿಂಗಳಲ್ಲಿ ನಡೆದ ಸರ್ವ ಸದಸ್ಯರ ಸಭೆ ಸೂರ್ಯನಾರಾಯಣರಾವ್ ಹಾಗೂ ಎ. ಕೆ. ಸುಬ್ಬಯ್ಯನವರನ್ನು ಮಾತ್ರ ಗೌರವ ಸದಸ್ಯರಾಗಿ ಸ್ವೀಕರಿಸಿತು. ಎಂದು ತಪ್ಪಾಗಿ ಪ್ರಕಟವಾಗಿದೆ. ವಾಸ್ತವವಾಗಿ, ಎ. ಕೆ. ಸುಬ್ಬಯ್ಯನವರ ಹೆಸರನ್ನು ಗೌರವ ಸದಸ್ಯತ್ವದ ಸ್ಥಾನಕ್ಕೆ ಸೂಚಿಸಲಾಗಿತ್ತಷ್ಟೆ. ಆದರೆ ಗೌರವ ಸದಸ್ಯರಾಗಿ ಆಯ್ಕೆಯಾದವರು ಕಾಂ. ಸೂರ್ಯನಾರಾಯಣರಾವ್ ಮಾತ್ರ. ವರದಿಯಲ್ಲಾಗಿರುವ ಪ್ರಮಾದಕ್ಕೆ "ಐಕ್ಯರಂಗ" ವಿಷಾದ ವ್ಯಕ್ತಪಡಿಸುತ್ತದೆ

ಆರ್.ಎಸ್.ಎಸ್. ಪಾತಕಿಗಳಿಂದ ಮಹಿಳೆಯರ ಮೇಲೆ ಹಲ್ಲೆ-ಹಸುಳೆಗಳ ಕೊಲೆ

ಒರಿಸ್ಸಾದ ಕಲ್ಯಾ ಕಬ್ಬಣದ ಅದುರಿನ ಗಣಿಯ ಕಾರ್ಮಿಕರ ವಸತಿ ಪ್ರದೇಶದ ಮೇಲೆ ಆರ್.ಎಸ್.ಎಸ್.ನ ಗೂಂಡಾಗಳು ಸೆಪ್ಟೆಂಬರ್ 24ರ ರಾತ್ರಿ ಆಕ್ರಮಣ ನಡೆಸಿ ಸಿ.ಐ.ಟಿ.ಯು. ಒರಿಸ್ಸಾ ರಾಜ್ಯ ಮಂಡಳಿ ಸದಸ್ಯ ಕಾ. ಅನಂತರಾವುತ ಅವರ 5 ವರ್ಷದ ಮಗುವನ್ನು ಕೊಂದು, ಅವರ ಪತ್ನಿ ಹಾಗೂ ಅತ್ತಿಗೆಯ ಮೇಲೆ ಆಕ್ರಮಣ ನಡೆಸಿ ಅವರುಗಳನ್ನು ತೀವ್ರವಾಗಿ ಗಾಯಗೊಳಿಸಿದ್ದಾರೆ. ತಮ್ಮ ನ್ಯಾಯಯುತ ಬೇಡಿಕೆಗಳಿಗಾಗಿ ಹೋರಾಟ ನಡೆಸುತ್ತಿರುವ ಕಾರ್ಮಿಕರಲ್ಲಿ ಭೀತಿ ಹುಟ್ಟಿಸುವ ಸಲುವಾಗಿ ಈ ಆಕ್ರಮಣ ನಡೆದಿದೆ.

ಹೋರಾಟ ನಿರತ ಟ್ರೇಡ್ ಯೂನಿಯನ್ ಕಾರ್‍ಯಕರ್ತರ ಹೆಂಡತಿ-ಮಕ್ಕಳ ಮೇಲೆ ನಡೆದಿರುವ ಈ ಹೀನ ಪಾತಕವನ್ನು ಖಂಡಿಸಲು ಪದಗಳೇ ಸಾಲದಾಗಿದೆ ಎಂಬುದಾಗಿ ಸಿ.ಐ.ಟಿ.ಯು.ನ ಅಧ್ಯಕ್ಷರಾದ ಕಾ. ಬಿ. ಟಿ. ರಣದಿವೆ ಅವರು ನೀಡಿರುವ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಾ. ರಾವುತ್ ಅವರಿಗೆ ತಮ್ಮ ಸಂತಾಪವನ್ನು ವ್ಯಕ್ತಪಡಿಸುತ್ತಾ ಒರಿಸ್ಸಾ ಸರ್ಕಾರ ಕೂಡಲೇ ಪಾತಕಿಗಳನ್ನು ಬಂಧಿಸಿ ಅವರ ಮೇಲೆ ಕ್ರಮ ಕೈಗೊಳ್ಳಬೇಕೆಂದು ಸಿ. ಐ. ಟಿ. ಯು. ಒತ್ತಾಯಿಸಿದೆ.

ಆಪಾದಿತರ ಬಂಧನಕ್ಕೆ ಒತ್ತಾಯಿಸಿ ಸಿ.ಐ.ಟಿ.ಯು. ರಾಜ್ಯ ಸಮಿತಿಗಳು ಮತ್ತು ಸಂಬಂಧಿಸಿದ ಯೂನಿಯನ್ನುಗಳು ಒರಿಸ್ಸಾ ಮುಖ್ಯಮಂತ್ರಿಗಳಿಗೆ ಟೆಲಿಗ್ರಾಂ ಮತ್ತು ಪತ್ರಗಳನ್ನು ಕಳುಹಿಸಬೇಕೆಂದು ಸಿ. ಐ. ಟಿ. ಯು. ನಿರ್ದೇಶನ ನೀಡಿದೆ.

ಜೆ. ಎನ್. ಯು. ಸಂಗಾತಿಗಳಿಗೆ ಅಭಿನಂದನೆ

ಕಳೆದ ಅಕ್ಟೋಬರ್ 21 ರಂದು ದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷಸ್ಥಾನಕ್ಕೆ ಚುನಾಯಿತರಾದ ಕರ್ನಾಟಕದ ಕಾಮ್ರೇಡ್ ರಶ್ಮಿ ದೊರೆಸ್ವಾಮಿ ಹಾಗೂ ಇತರೆ ಪದಾಧಿಕಾರಿಗಳು ಮತ್ತು ಕೌನ್ಸಿಲರ್‌ಗಳನ್ನು ಎಸ್.ಎಫ್.ಐ. ಕರ್ನಾಟಕ ರಾಜ್ಯಸಮಿತಿಯ ಪರವಾಗಿ ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಅಭಿನಂದಿಸಿದ್ದಾರೆ. ಎಸ್.ಎಫ್.ಐ. ದೆಹಲಿ ರಾಜ್ಯ ಘಟಕಕ್ಕೆ ಒಂದು ಅಭಿನಂದನಾ ಸಂದೇಶ ಕಳುಹಿಸಲಾಗಿದೆ.

ಎಸ್.ಎಫ್.ಐ ಬೆಂಗಳೂರು ವಿಶ್ವವಿದ್ಯಾಲಯ ಸಂಘಟನಾ ಸಮಿತಿ ಮತ್ತು ನಗರ ಸಮಿತಿಗಳು ಪ್ರತ್ಯೇಕ ಅಭಿನಂದನಾ ನಿರ್ಣಯಗಳನ್ನು ಅಂಗೀಕರಿಸಿವೆ.

ಅಳಪೆ ಪ್ರದೇಶ ಬೀಡಿ ಲೇಬರ್ ಯೂನಿಯನ್‌ನ ಮಹಾಸಭೆ

ಅಳಪೆ ಪ್ರದೇಶ ಬೀಡಿ 'ಲೇಬರ್ ಯೂನಿಯನಿನ ವಾರ್ಷಿಕ ಮಹಾಸಭೆಯು ತಾರೀಖು 2-10-1983 ರಂದು ನಾಗೂರಿ ಶಾಲೆಯಲ್ಲಿ ಕಾ. ಕೆ. ಪಿ. ಸಾಲಿಯಾನರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಜೆ. ಸದಾಶಿವ ಕಾರ್ಪೆಂಟರ್ ಸಭಿಕರನ್ನು ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಜೆ. ಬಾಲಕೃಷ್ಣಶೆಟ್ಟಿಯವರು ವಾರ್ಷಿಕ ವರದಿಯನ್ನು, ಕೋಶಾಧಿಕಾರಿ ಮರಪ್ಪನವರು ಲೆಕ್ಕಪತ್ರವನ್ನು ಸಭೆಯ ಮುಂದೆ ಮಂಡಿಸಿದರು. ಸಭೆಯು ಪರಿಶೀಲಿಸಿ ಸರ್ವಾನುಮತದಿಂದ ವರದಿ ಮತ್ತು ಲೆಕ್ಕಪತ್ರವನ್ನು ಅಂಗೀಕರಿಸಿತು. ಮುಂದಿನ ವರ್ಷಕ್ಕೆ ಕೆ. ಪಿ. ಸಾಲಿಯನ್ ಅಧ್ಯಕ್ಷ, ಜೆ. ಸದಾಶಿವ ಕಾರ್ಪೆಂಟರ್ ಮತ್ತು ಯು. ತಿಮ್ಮಪ್ಪ ಉಪಾಧ್ಯಕ್ಷರು, ಜೆ. ಬಾಲಕೃಷ್ಣಶೆಟ್ಟಿ ಕಾರ್ಯದರ್ಶಿ, ಜೆ.ಸಂಜೀವ ಮತ್ತು ಹರಿಶ್ಚಂದ್ರನಾಯ್ಕ ಜೊತೆ ಕಾರ್ಯದರ್ಶಿ, ಶ್ರೀ ಕೆ. ಶ್ರೀಧರ, ಕೋಶಾಧಿಕಾರಿ ಇವರನ್ನೊಳಗೊಂಡು 17 ಮಂದಿಯ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಮಹಾಸಭೆಯು ಬೆಲೆ ಏರಿಕೆಯನ್ನು ಖಂಡಿಸುವ ಮತ್ತು ಮನೆ ನಿವೇಶನಕ್ಕೆ ಹಕ್ಕುಪತ್ರ ಕೊಡಬೇಕೆಂದು ಸರಕಾರವನ್ನು ಒತ್ತಾಯಿಸುವ ಠರಾವನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ಸಭೆಯಲ್ಲಿ ಸಿ.ಐ.ಟಿ.ಯು. ಕಾರ್ಯದರ್ಶಿ ಕಾ. ಮುಸಬ್ಬ ಮತ್ತು ಸೌತ್ ಕೆನರ ಬೀಡಿ ವರ್ಕರ್‍ಸ್ ಫೆಡರೇಶನಿನ ಕಾರ್ಯದರ್ಶಿ ಕಾ. ಯು. ಬಿ. ಲೋಕಯ್ಯನವರು ಮಾತನಾಡಿ ಬೀಡಿ ಕಾರ್ಮಿಕರು ತಮ್ಮ ಹೋರಾಟದಿಂದಪಡೆದ ಸೌಲಭ್ಯವನ್ನು ಸಂಪೂರ್ಣ ಪಡೆಯಬೇಕಾದರೆ ಬೀಡಿ ಕಾರ್ಮಿಕರು ಜಾಗೃತರಾಗಬೇಕೆಂದು ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟನೆಯನ್ನು ಬಲಪಡಿಸಬೇಕೆಂದು ಕರೆ ನೀಡಿದರು.

ರಸ್ತೆ ಸಾರಿಗೆ ಕಾರ್ಮಿಕರ ಸಮ್ಮೇಳನ ಮುಂದಕ್ಕೆ

ಪಂಜಾಬಿನಲ್ಲಿ ರಾಜಕೀಯ ಸ್ಥಿತಿ ಹದಗೆಟ್ಟಿರುವ ಕಾರಣ ಆ ಕಾರ್ಯದ ಸಂಗ್ರೂರ್‌ನಲ್ಲಿ ಅಕ್ಟೋಬರ್ 21 ರಿಂದ 23 ರವರೆಗೆ ನಡೆಯಬೇಕಾಗಿದ್ದ ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟದ ಎರಡನೇ ಸಮ್ಮೇಳನವನ್ನು ಮುಂದೂಡಲಾಗಿದೆ. ಇದನ್ನು ಸಂಬಂಧಪಟ್ಟ ಎಲ್ಲಾ ಸಂಘಗಳು ಗಮನಿಸಬೇಕಾಗಿ ಸಿ.ಐ.ಟಿ.ಯುನ ಕಾರ್ಯದರ್ಶಿಗಳು ಕೋರಿದ್ದಾರೆ.

ಬೆಂಗಳೂರು

ರೈತರ ಮೆರವಣಿಗೆ-ಬಹಿರಂಗ ಸಭೆ

ಕರ್ನಾಟಕ ಪ್ರಾಂತ ರೈತ ಸಂಘ ಬೆಂಗಳೂರು ಜಿಲ್ಲಾ ಘಟಕದ ಆಶ್ರಯದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ರೈತರ ಬೇಡಿಕೆಗಳಾದ ಸರ್ಕಾರಿ ಬಂಜರು ಭೂಮಿಯಲ್ಲಿ ಬೇಸಾಯ ಮಾಡುತ್ತಿರುವ ರೈತರನ್ನು ಗುರ್ತಿಸಿ ಸಾಗುವಳಿ ಪತ್ರ ನೀಡಬೇಕು, ಗ್ರಾಮಾಂತರ ಪ್ರದೇಶಗಳ ಆಹಾರ ವಿತರಣೆಯನ್ನು ಪಟ್ಟಣ ಪ್ರದೇಶದಲ್ಲಿ ನೀಡುವಂತೆ ನೀಡಬೇಕು, ಕೃಷಿ ಕಾರ್ಮಿಕರಿಗೆ ಜೀವನಾವಶ್ಯಕ ಕನಿಷ್ಟ ಕೂಲಿ ನೀಡಬೇಕು, ನಿವೇಶನ ರಹಿತರಿಗೆ ಸ್ಥಳ ನೀಡಿ ಜನತಾ ಹುಡ್ಕೊ ಸ್ಕೀಂನಲ್ಲಿ ಮನೆ ಕಟ್ಟಿಸಿಕೊಡುವುದು ಮತ್ತು ಇತರೆ ಸ್ಥಳೀಯ ಬೇಡಿಕೆಗಳನ್ನು ದಿನಾಂಕ 31-10-83ರಂದು ಬೆಂಗಳೂರು ದಕ್ಷಿಣ ತಾಲ್ಲೂಕಿನ ರೈತರು ಸಿಲ್ವರ್ ಜ್ಯೂಬಿಲಿ ಪಾರ್ಕಿನಿಂದ ಮೆರವಣಿಗೆಯಲ್ಲಿ ಹೊರಟು ಜಿಲ್ಲಾಧಿಕಾರಿ ಹಾಗೂ ತಹಸಿಲ್ದಾರರ ಕಛೇರಿ ಎದುರು ಪ್ರದರ್ಶನ ನಡೆಸಿದರು.

ನಂತರ ಶಾಸಕರಾದ ಸೂರ್ಯನಾರಾಯಣರಾವ್, ಪ್ರಾಂತ ರೈತ ಸಂಘದ ಕಾರ್ಯದರ್ಶಿ ಪಿ. ಜಗನ್ನಾಥ ಜಿಲ್ಲಾ ಅಧ್ಯಕ್ಷರಾದ ರಾಮಭದ್ರಯ್ಯ ಪ್ರಧಾನ ಕಾರ್ಯದರ್ಶಿ ಲಕ್ಕಣ್ಣ, ನವರನ್ನೊಳಗೊಂಡ 10 ಜನರ ನಿಯೋಗವು ವಿಭಾಗಾಧಿಕಾರಿ ಹಾಗೂ ತಹಸೀಲ್ದಾರರವರಿಗೆ ಮನವಿ ಪತ್ರ ಸಲ್ಲಿಸಿತು. ಸುಮಾರು 2 ಘಂಟೆಗಳ ಕಾಲ ಬೇಡಿಕೆಗಳ ಬಗ್ಗೆ ಚರ್ಚಿಸಿದ ಅಧಿಕಾರಿಗಳು ದರಕಾಸ್ತುದಾರರ ಬಗ್ಗೆ ಒಂದು ತಿಂಗಳ ಅವಕಾಶ ಕೊಟ್ಟರೆ ನೀಡಿರುವ ಪಟ್ಟಿಯನ್ನು ಪರಿಶೀಲಿಸಿ ರೈತ ಪ್ರತಿನಿಧಿಗಳನ್ನು ಕರೆದು ಚರ್ಚೆ ನಡೆಸಿ ಮಂಜೂರು ಮಾಡುವುದಾಗಿ ತಿಳಿಸಿದರು.

50 ಹಳ್ಳಿಗಳಲ್ಲಿ ಸುಮಾರು 1000 (ಸಾವಿರ) ದರಕಾಸ್ತುದಾರರನ್ನ ಪಟ್ಟಿಮಾಡಲಾಗಿತ್ತು. ಉಳಿದ ಕೆಲವು ಸ್ಥಳೀಯ ಸಮಸ್ಯೆಗಳ ಬಗ್ಗೆ ಈ ತಕ್ಷಣ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು.

ಮನವಿ ಪತ್ರ ನೀಡಿದ ನಂತರ ನಡೆದ ಬಹಿರಂಗ ಸಭೆಯಲ್ಲಿ ಜಗನ್ನಾಥ, ಲಕ್ಕಣ್ಣ, ಮನೋಹರ್, ಶಾಮಣ್ಣರೆಡ್ಡಿ, ಶಿವಶಂಕರ್, SFIನ ಶಾಂತಕುಮಾರಿ ಮತ್ತಿತರರು ಭಾಷಣ ಮಾಡಿ ಬೇಡಿಕೆ ಈಡೇರದಿದ್ದರೆ ಈ ಹೋರಾಟವನ್ನು ಬಲಿಷ್ಟಗೊಳಿಸಿ ರೈತ ಸಂಘಟನೆಯನ್ನು ಪ್ರತಿ ಗ್ರಾಮಗಳಲ್ಲೂ ಸಂಘಟಿಸುವಂತೆ ಕರೆ ನೀಡಿದರು. ಈ ಮೆರವಣಿಗೆ ನೇತೃತ್ವವನ್ನು ವೆಂಕಟಾಚಲಯ್ಯ, ರಾಮಯ್ಯ, ಶಾಮಣ್ಣ ರೆಡ್ಡಿ ಶಿವಶಂಕರ್ ವಹಿಸಿದ್ದರು.

ಅಕ್ಟೋಬರ್ ಕ್ರಾಂತಿಯ ೬೭ನೇ ವಾರ್ಷಿಕೋತ್ಸವ

ಸೋವಿಯತ್ ಒಕ್ಕೂಟಕ್ಕೆ ಶುಭಾಶಯಗಳು

ರಷ್ಯಾದಲ್ಲಿ ಕ್ರಾಂತಿಯಾಗಿ ಕಾರ್ಮಿಕ ವರ್ಗದ ಪ್ರಭುತ್ವ ಸ್ಥಾಪನೆಯಾಗಿ ನಾಳೆಯ ನವೆಂಬರ್ 7ಕ್ಕೆ 66 ವರ್ಷಗಳು ಮುಗಿಯುತ್ತದೆ. ಶೋಷಣೆಯಿಂದ ಮಾನವನನ್ನು ಮುಕ್ತನನ್ನಾಗಿ ಮಾಡುವ ಪ್ರಯತ್ನದ ಮೊದಲನೆಯ ವಿಜಯ ಈ ಕ್ರಾಂತಿ. ಅಂದಿನಿಂದ ಪ್ರಾರಂಭವಾಗಿ ಪ್ರಪಂಚದಲ್ಲಿ ಹಲವಾರು ದೇಶಗಳು ಸಮಾಜವಾದಿ ಸಮಾಜವನ್ನು ನಿರ್ಮಾಣ ಮಾಡುವ ಹಾದಿಯನ್ನು ಹಿಡಿದಿವೆ. ರಷ್ಯದ ಕ್ರಾಂತಿ ಮಾನವ ಇತಿಹಾಸದಲ್ಲಿ ಒಂದು ಹೊಸ ಯುಗವನ್ನೇ ಪ್ರಾರಂಭ ಮಾಡಿದೆ. ವಸಾಹತು ದೇಶಗಳಲ್ಲಿ ಸ್ವಾತಂತ್ರ್ಯಕ್ಕೋಸ್ಕರ ಸಾಮ್ರಾಜ್ಯಶಾಹೀ ಶಕ್ತಿಗಳಿಗೆದುರಾಗಿ ನಡೆಯುತ್ತಿದ್ದ ಹೋರಾಟಗಳ ಮೇಲೆ ಈ ಕ್ರಾಂತಿ ಗಾಢ ಪರಿಣಾಮಗಳನ್ನುಂಟುಮಾಡಿತು.

ಜಾಗತಿಕ ಬಂಡವಾಳಶಾಹೀ ಪದ್ಧತಿ ಈಗ ತೀವ್ರ ಬಿಕ್ಕಟ್ಟಿನಲ್ಲಿದ್ದು ಬಿಕ್ಕಟ್ಟಿನಿಂದ ಪಾರಾಗಲು ಯುದ್ಧದ ಹಾದಿಯನ್ನು ಹಿಡಿಯುತ್ತಿದೆ. ಜಾಗತಿಕ ಸಾಮ್ರಾಜ್ಯಶಾಹಿಗಳ ನೇತಾರನಾಗಿರುವ ಅಮೇರಿಕ ಸಂಯುಕ್ತ ಸಂಸ್ಥಾನ ಈಗ ಅಣು ಯುದ್ಧದ ಬೆದರಿಕೆಯನ್ನು ಒಡ್ಡಿದೆ. ಯುದ್ಧವನ್ನು ನಿವಾರಿಸಲು ಹಾಗೂ ವಿಶ್ವದ ಶಾಂತಿಯನ್ನು ರಕ್ಷಿಸಲು ನಡೆಯುತ್ತಿರುವ ಹೋರಾಟದ ಮುಂಚೂಣಿಯಲ್ಲಿದೆ ಸೋವಿಯತ್ ಒಕ್ಕೂಟ.

ರಷ್ಯದ ಕ್ರಾಂತಿಯ 67ನೇ ವಾರ್ಷಿಕೋತ್ಸವದ ಈ ಸಂದರ್ಭದಲ್ಲಿ "ಐಕ್ಯರಂಗ" ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪಕ್ಷಕ್ಕೆ ಸರ್ಕಾರಕ್ಕೆ ಹಾಗೂ ಜನತೆಗೆ ಕ್ರಾಂತಿಕಾರೀ ಶುಭಾಶಯಗಳನ್ನು ಸಲ್ಲಿಸುತ್ತದೆ.

"ಐಕ್ಯರಂಗ"ದ ಮುಂದಿನ ಸಂಚಿಕೆಯಲ್ಲಿ ಅಕ್ಟೋಬರ್ ಸಮಾಜವಾದೀ ಮಹಾಕ್ರಾಂತಿಗೆ ಸಂಬಂಧಿಸಿ ಲೇಖನವನ್ನು ಪ್ರಕಟಿಸಲಾಗುವುದು.

ತಿರುವನಂತಪುರ

ಪಾರ್ಟಿ ಆಫೀಸಿನ ಮೇಲೆ ಕಾಂಗ್ರೆನಿಂದ ಬಾಂಬ್ ದಾಳಿ

— ಪೋಲಿಟ್ ಬ್ಯೂರೋ ಖಂಡನೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇರಳ ರಾಜ್ಯ ಸಮಿತಿಯ ಕಚೇರಿ ಇರುವ ಎ. ಕೆ. ಗೋಪಾಲನ್ ಸ್ಮಾರಕ ಭವನದ ಮೇಲೆ ಕಾಂಗ್ರೆ ವಿದ್ಯಾರ್ಥಿಗಳು ನಡೆಸಿರುವ ಬಾಂಬ್ ದಾಳಿಯನ್ನು ಸಿ.ಪಿ.ಐ. (ಎಂ).ನ ಪೊಲಿಟ್ ಬ್ಯೂರೋ ಖಂಡಿಸಿದೆ.

ರಾಜ್ಯದಲ್ಲಿ ಕಾಲೇಜು ಸಂಘಗಳಿಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆನ ವಿದ್ಯಾರ್ಥಿ ಸಂಘಟನೆ (ಕೆ.ಎಸ್.ಯು.) ಅನುಭವಿಸಿದ ಸೋಲಿನ ಹಿನ್ನೆಲೆಯಲ್ಲಿ ನಡೆದಿರುವ ಪ್ರಚೋದಕ ಚಟುವಟಿಕೆಗಳ ಒಂದು ಭಾಗವಾಗಿದೆ. ಅಲ್ಲದೆ ಸಿ.ಪಿ.ಐ. (ಎಂ) ಮತ್ತು ಇತರ ವಿರೋಧ ಪಕ್ಷಗಳ ಮೇಲೆ ಕಾಂಗ್ರೆ ಮತ್ತು ಅದರ ಆಳುವ ರಂಗದ ಮಿತ್ರ ಪಕ್ಷಗಳು ರಾಜ್ಯವ್ಯಾಪಿಯಾಗಿ ಆರಂಭಿಸಿರುವ ಆಕ್ರಮಣದ ಸಂದರ್ಭದಲ್ಲಿ ಈ ಘಟನೆಯನ್ನು ನೋಡಬೇಕಾಗಿದೆ.

ತಮ್ಮ ಅನುಯಾಯಿಗಳ ಈ ಸಮಾಜ ವಿರೋಧಿ ಚಟುವಟಿಕೆಗಳನ್ನು ಹತ್ತಿಕ್ಕುವ ಬದಲು ಕಾಂಗ್ರೆ ಮತ್ತದರ ಸರ್ಕಾರದ ಮಿತ್ರ ಪಕ್ಷಗಳು ಪೋಲೀಸರನ್ನು ಉಪಯೋಗಿಸಿಕೊಂಡು ರೌಡಿಗಳನ್ನು ರಕ್ಷಿಸುತ್ತಿದೆ, ಸಿ. ಪಿ. ಐ. (ಎಂ) ಮತ್ತಿತರ ವಿರೋದ ಪಕ್ಷಗಳ ಕಾರ್‍ಯಕರ್ತರನ್ನು ಪೋಲೀಸರು ಹಿಂಸೆಗೆ ಗುರಿಮಾಡುತ್ತಿರುವುದಲ್ಲದೆ ಅವರ ಮೇಲೆ ಸುಳ್ಳು ಆರೋಪಗಳನ್ನು ಹೊರಿಸುತ್ತಿದ್ದಾರೆ.

ತಿರುವನಂತಪುರದ ಪಾರ್ಟಿ ಕಚೇರಿಯ ಮೇಲೆ ನಡೆದ ಬಾಂಬ್ ದಾಳಿಯನ್ನು ರಾಜ್ಯದಾದ್ಯಂತ ಸಾರ್ವಜನಿಕರು ಸ್ವಯಂ ಸ್ಫೂರ್ತಿಯಿಂದ ಪ್ರತಿಭಟಿಸಿರುವುದಕ್ಕಾಗಿ ಪೊಲಿಟ್ ಬ್ಯೂರೋ ಸಂತಸ ವ್ಯಕ್ತಪಡಿಸಿದೆ. ಆಡಳಿತ ಪಕ್ಷದ ಅನುಯಾಯಿಗಳು ಅನುಸರಿಸುತ್ತಿರುವ ಸಮಾಜ ವಿರೋಧಿ ಚಟುವಟಿಕೆಗಳಿಗೆ ವಿರುದ್ಧವಾಗಿ ಸಾರ್ವಜನಿಕ ಅಭಿಪ್ರಾಯ ವ್ಯಕ್ತಪಟ್ಟಿರುವುದನ್ನು ಗಮನಕ್ಕೆ ತೆಗೆದುಕೊಂಡು ಆಳುವ ಪಕ್ಷಗಳು ಪಾಠ ಕಲಿಯುತ್ತವೆಂದು ಪೊಲಿಟ್ ಬ್ಯೂರೋ ಆಶಿಸುತ್ತದೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee K. V. Temple Street Sultanpet, Bangalore-560053. Editorial and managerial office. L-56, K. V. Temple Street, Sultanpet, B-53. Phone: 2415[illegible] Editor: P. Ramachandra Rao